ಅಧ್ಯಕ್ಷರು.—೬೧ನೇ ನಿಯಮ ಏನಿದೆ ಅದು ನೀವು ಕಳುಹಿಸಿರುವ ನಿಲುವಳಿ ಸೂಚನೆಗೆ ಹೊಂದಿಕೊಳ್ಳತಕ್ಕಂಥಾದ್ದು. ನೀವು ನನ್ನನ್ನು ಭೇಟಿ ಮಾಡಿ, ನಂತರ ತೀರ್ಮಾನ ಮಾಡಬಹುದು.

ಶ್ರೀ ಸಿ. ಬೈರೇಗೌಡ.—ಸರಕಾರ ಒಪ್ಪುದಾದರೆ ಇದಕ್ಕೆ ಪರಿಹಾರವನ್ನೂ ಕೂಡ ನಾನೇ ಸೂಚನೆ ಮಾಡುತ್ತೇನೆ. ಈ ವಿಚಾರದಲ್ಲಿ ಆಳವಾಗಿ ಅಭ್ಯಾಸ ಮಾಡಿ ವರದಿಯನ್ನು ಕೊಡುವುದಕ್ಕೆಂದು ಹಿಂದಿನ ಸರಕಾರ ಸದನದ ಸಮಿತಿಯನ್ನು ರಚನೆ ಮಾಡಿತ್ತು, ನಂತರ. ವಿಧಾನ ಸಭೆ ವಿಸರ್ಜನೆಯಾಯಿತು. ಅದೂ ಕೂಡ ಅಲ್ಲಿಗೆ ನಿಂತಿತು. ಸರಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು ಇದನ್ನು ನಾನು ಹೇಳುತ್ತಿಲ್ಲ. ಈಗ ಇರತಕ್ಕಂತಹ ಸಮಸ್ಯೆಯನ್ನು ಬಗೆಹರಿಸಬೇಕು ರೈತರಿಗೆ ಆಗಿರತಕ್ಕಂತಹ ಅನ್ಯಾಯ ಮತ್ತು ಆಗುತ್ತಿರತಕ್ಕಂತಹ ತೊಂದರೆಯನ್ನು ಬಗೆಹರಿಸಬೇಕಾದುದು ಸರಕಾರದ ಮತ್ತು ನಮ್ಮ ಕರ್ತವ್ಯವಾಗಿದೆ. ಇದರ ಬಗ್ಗೆ ನಾವು ಸರಕಾರಕ್ಕೆ ಸಹಕಾರ ಕೊಡಲು ತಯಾರಿದ್ದೇವೆ. ಇದರ ಬಗ್ಗೆ ಸದನದ ಸಮಿತಿಯನ್ನು ಮಾಡುವುದಾದರೆ ಅನಾವಶ್ಯಕವಾದಂತಹ ಚರ್ಚೆಯನ್ನು ಮಾಡುವುದಕ್ಕೆ ನಾನು ತಯಾರಿಲ್ಲ. ಒಟ್ಟಿನಲ್ಲಿ ನಮಗೆ ಇರತಕ್ಕಂತಹ ಸಮಸ್ಯೆ ಬಗೆಹರಿಯಬೇಕು. ಸದನದ ಸಮಿತಿಯನ್ನು ಮಾಡಲಿಕ್ಕೆ ಸರಕಾರ ಒಪ್ಪಬೇಕೆಂದು ತಮ್ಮ ಮೂಲಕ ಸರಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(3) ರಾಜ್ಯದ ರೈತರ ಕೃಷಿ ಸಾಲವನ್ನು ಮನ್ನ ಮಾಡುವ ಬಗ್ಗೆ

† ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರಾಜ್ಯದ ಸುಮಾರು ಮೂರು ಕೋಟಿ ಜನಕ್ಕೆ ಸಂಬಂಧಪಟ್ಟ ಹಾಗೆ ಒಂದು ನಿಲುವಳಿ ಸೂಚನೆಯನ್ನು ನಾನು ತಮಗೆ ಕಳಿಸಿಕೊಟ್ಟಿದ್ದೇನೆ. ಪ್ರಾರಂಭದಲ್ಲೇ ನಾನು ಇದರ ಬಗ್ಗೆ ತಮ್ಮಲ್ಲಿ ಪ್ರಾರ್ಥನೆ ಮಾಡಿದೆ. ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ ನಾನು ಯಾವ ಒಂದು ನಿಲುವಳಿ ಸೂಚನೆಯನ್ನು ಕಳುಸಿಕೊಟ್ಟಿದ್ದೇನೆ ಮತ್ತು ಅದರಲ್ಲಿ ಯಾವ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ ಆ ಒಂದು ವಿಷಯದಲ್ಲಿ ಈ ಸದನದ ಸದಸ್ಯರೆಲ್ಲರಿಗೂ ಆಸಕ್ತಿ ಇದೆಯೆಂದು ನಾನು ಭಾವಿಸಿದ್ದೇನೆ. ಸುಮಾರು ಮೂರು ಕೋಟಿ ರೈತರಿಗೆ ಸಂಬಂಧ ಪಟ್ಟಂತಹ ವಿಷಯ ಇದು. ಈ ಸದನ ಸೇರುವುದರ ಒಳಗಾಗಿ ಮಾನ್ಯ ಮುಖ್ಯ ಮಂತ್ರಿಗಳು ಬೇರೆ ಬೇರೆ ರಾಜ್ಯದ ಮುಖ್ಯ ಮಂತ್ರಿಗಳು ಅಲ್ಲಿರುವಂತಹ ಕೃಷಿ ಸಾಲವನ್ನು ಯಾವ ರೀತಿ ಮನ್ನಾ ಮಾಡುವುದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆಯೋ ಅದೇ ರೀತಿಯ ತೀರ್ಮಾನವನ್ನು ರೈತರ ಹಿತದೃಷ್ಟಿಯಿಂದ ತೆಗೆದುಕೊಳ್ಳುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೇವು. ಆದರೆ ತಾವು ಮಾಡಲಿಲ್ಲ, ಈಗಲೂ ಕೂಡ ಕಾಲ ಮೀರಿಲ್ಲ. ತಮಗೆ ಗೊತ್ತಿರುವ ಹಾಗೆ ಹಿಮಾಚಲ ಪ್ರದೇಶದಲ್ಲಿರುವಂತಹ ರೈತರ ಕೃಷಿ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿಕೆ ಕೊಟ್ಟಿದ್ದಾರೆ. ಅಲ್ಲಿ ಕಾಂಗ್ರೇಸ್ ಸರಕಾರ ಇದೆ. ಮತ್ತು ಬಿಹಾರದಲ್ಲಿ ೧೫,೦೦೦ ಕ್ಕಿಂತ ಒಳಗಡೆ ಇರತಕ್ಕಂತಹ ಕೃಷಿ ಸಾಲವನ್ನು ಮನ್ನಾ ಮಾಡುವುದಾಗಿ ಹೇಳಿಕೆ ಕೊಟ್ಟಿದ್ದಾರೆ. ಒರಿಸ್ಸಾದಲ್ಲಿ, ಕೂಡ ಸಾಲ ಮನ್ನಾ ಮಾಡುವುದಾಗಿ ಹೇಳಿಕೆ ಕೊಟ್ಟಿದ್ದಾರೆ ನಾನು ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ಡಿಸೆಂಬರ್ ಒಳಗಾಗಿ ಅವರು ತೆಗೆದುಕೊಂಡಿರುವಂತಹ ಕೃಷಿ ಸಾಲವನ್ನು ಮರು ಪಾವತಿ ಮಾಡುವಂತಹ ಸಂದರ್ಭ ಈಗ ಬರುತ್ತಿದೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ಕೃಷಿ ಸಾಲವನ್ನು ಮನ್ನಾ ಮಾಡಬೇಕೆಂದು ಯೋಚನೆ ಮಾಡುವಂಥಾದ್ದು ಇದೆ. ಕರ್ನಾಟಕ ಸರಕಾರ ಕೂಡ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಕೇಂದ್ರ ಸರಕಾರದ ನೆರವೂ ಸಿಗುವಂತಹ ಸಂದರ್ಭ ಇದೆ. ಅತಿವೃಷ್ಟಿ, ಅನಾವೃಷ್ಟಿಗೆ ರೈತರು ಬಲಿಯಾಗಿದ್ದಾರೆ ತಮ್ಮ ಸಾಲ ಮನ್ನಾ ಆಗುತ್ತದೆಂದು ಅವರು ಆಸೆ ಇಟ್ಟುಕೊಂಡಿದ್ದಾರೆ. ತಮಗೆ ಇಷ್ಟು ಬಹುಮತ ಬರಲು ಕಾರಣವೇನೆಂದರೆ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಈ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ತಾವು ಹೇಳಿದ್ದೀರಿ ಅದಕ್ಕೋಸ್ಕರ ತಮಗೆ ಇಷ್ಟು ಬಹುಮತ ಬಂದಿದೆ.

ಅಧ್ಯಕ್ಷರು.—ತಾವು ವಿವರಕ್ಕೆ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಬಿ. ಕೋಳಿವಾಡ್.—ನನ್ನದು ಒಂದು ಕ್ರಿಯಾಲೋಪ ಇದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಭೈರೇಗೌಡರವರು ಕಳುಹಿಸಿದ ನಿಲುವಳಿ ಸೂಚನೆ ನಿಯಮ ೬೧ ಅಡ್ಡಿ ಬರುತ್ತದೆಂದು ಮಾನ್ಯ ಮೊಯಿಲಿಯವರು ಕ್ರಿಯಾಲೋಪ ಎತ್ತಿದರು. ಈ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಡಿಸೆಂಬರ್ ಒಳಗಾಗಿ ಸಾಲವನ್ನು ತೀರಿಸುವಂತಹ ಸಂದರ್ಭ ಇದೆ. ಈ ಸದನ ಮುಗಿದ ಮೇಲೆ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ ರೈತರ ಕೃಷಿ ಸಾಲ. ಸಹಕಾರಿ ಸಂಘದ ಸಾಲ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲವನ್ನು ಮನ್ನಾ ಮಾಡುವುದಕ್ಕೆ ಸರಕಾರ ಸಿದ್ಧವಿದೆಯೋ ಇಲ್ಲವೋ ಎಂದು ಮಾನ್ಯ ಸಭಾನಾಯಕರು ತಿಳಿಸಿದರೆ ನಾನು ವಿವರಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗಳು

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರ ಬಗ್ಗೆ ಸರಕಾರದ ನಿಲುವು ಏನು ಎಂಬುದನ್ನು ಸ್ಪಷ್ಟ ಮಾಡಬೇಕು. ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಸರಕಾರ ಯೋಚನೆ ಮಾಡುತ್ತದೆಯೆ?

(ಗೊಂದಲ)

ಅಧ್ಯಕ್ಷರು.—ನಿಲುವಳಿ ಸೂಚನೆಯನ್ನೇ ಒಪ್ಪಿಕೊಳ್ಳದೇ ಇರುವಾಗ ಸರ್ಕಾರದಿಂದ ಈ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸತಕ್ಕಂಥಾದ್ದು ನಿರೀಕ್ಷೆ ಮಾಡತಕ್ಕಂಥಾದ್ದು ಸಾಧುವೇ ? ತಾವು ಯೋಚನೆ ಮಾಡಿ. ತಾವು ಕಳಿಸಿರತಕ್ಕಂತಹ ನಿಲುವಳಿ ಸೂಚನೆ ಬಗ್ಗೆ ನಿಯಮ ೬೧ರಲ್ಲಿ ಏನು ಇದೆ ಎಂಬುದನ್ನು ಈ ಸದನದ ಗಮನಕ್ಕೆ ತರಲಾಗಿದೆ. ತಾವು ಹೇಳಿರತಕ್ಕಂತಹ ವಿಚಾರ ಬಹಳ ಮಹತ್ವವಾದುದು. ಆದರೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬೇರೆ ಅವಕಾಶಗಳು ಇದೆ ಆ ಅವಕಾಶವನ್ನು ಉಪಯೋಗಿಸಿಕೊಳ್ಳೋಣ.

೧೨–೦೦ ಮಧ್ಯಾಹ್ನ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತಮ್ಮ ಮನಸ್ಸಿಗೆ ಮನವರಿಕೆ ಮಾಡುವ ವಿಷಯವೇನೆಂದರೆ ಈ ಸದನದಲ್ಲಿ ಆ ಕಡೆ ಕುಳಿತಿರತಕ್ಕಂಥ ನಮ್ಮೆಲ್ಲಾ ಕಾಂಗ್ರೆಸ್ ಸ್ನೇಹಿತರು ಈ ರಾಜ್ಯದ ಜನತೆಗೆ ಸಾಲ ಮನ್ನಾ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟು ಅಧಿಕಾರಕ್ಕೆ ಬಂದಿದ್ದಾರೆ. ಇಲ್ಲಿ ಈ ವಿಷಯವನ್ನೇ ಪ್ರಸ್ತಾಪ ಮಾಡದಿದ್ದರೆ ಹೇಗೆ ?

(ಗೊಂದಲ)

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ಇದು...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೇರೆ ಕಾಂಗ್ರೆಸ್ ರಾಜ್ಯಸರ್ಕಾರಗಳು ಚುನಾವಣೆಯಲ್ಲಿ ಘೋಷಣೆ ಮಾಡಿದಂತೆ ಸಾಲವನ್ನು ಮನ್ನಾ ಮಾಡಿದ್ದಾರೆ. ಇಲ್ಲಿ ನೀವು ಚುನಾವಣೆಯಲ್ಲಿ ಗೆದ್ದು ಬಂದಿದ್ದೀರಿ, ರೈತರಿಗೆ ಕೊಟ್ಟಂಥ ಆಶ್ವಾಸನೆಯನ್ನು ಮರೆತು ಕೈಕಟ್ಟಿ ಕುಳಿತುಕೊಂಡರೆ ಹೇಗೆ ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಭಿಪ್ರಾಯವೇನು ಎಂದು ಹೇಳಲಿ ದಿನಾಂಕ ೧೫–೧೧–೮೯ ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಾ ಈ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರಂತೆ ಮತದಾರರು ಕೂಡಾ ಓಟು ಕೊಟ್ಟು ತಮ್ಮನ್ನು ಗೆಲ್ಲಿಸಿದ್ದಾರೆ. ಈಗ ತಾವು ಅಧಿಕಾರಕ್ಕೆ ಬಂದಿದ್ದೀರಿ. ಇದರ ಬಗ್ಗೆ ಪ್ರಸ್ತಾಪ ಮಾಡದೇ ಇದ್ದರೆ ಈ ರಾಜ್ಯದ ಜನರಿಗೆ ದ್ರೋಹ ಮಾಡಿದಂತಾಗುವುದಿಲ್ಲವೇ? ಈ ಸರ್ಕಾರ ರೈತ ವಿರೋಧಿ ಸರ್ಕಾರವೇ ? ನಾವು ಸಾಲವನ್ನು ಮನ್ನಾ ಮಾಡುವುದಿಲ್ಲ ಎಂದು ಹೇಳಲಿ. ಅವರ ಅಭಿಪ್ರಾಯವೇನೆಂದು ನಮಗೆ ಸ್ಪಷ್ಟವಾಗಿ ತಿಳಿಸಬೇಕು ಸ್ವಾಮಿ.

(ಗೊಂದಲ)

ಅಧ್ಯಕ್ಷರು.—ನಾವು ಈ ಸದನದ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಕೆಲವು ಗ್ರೌಂಡ್ ರೂಲ್ಸ್ ಎಂದು ನಾವು ಹೇಳುತ್ತೇವೆಲ್ಲಾ ಆ ರೀತಿ ನಿಯಮಗಳನ್ನು ಕಾಪಾಡಿಕೊಂಡು ಬರಬೇಕಾಗುತ್ತದೆ. ಒಟ್ಟಿಗೆ ಆರು ಜನ ಸದಸ್ಯರು, ಏಳು ಸದಸ್ಯರು ಎದ್ದು ನಿಂತು ಏಕಕಾಲದಲ್ಲಿ ಮಾತನಾಡಿದರೆ

ಹೇಗೆ ಒಂದು ಅಂಶವನ್ನು ತಾವು ಗಮನಿಸಬೇಕಾಗುತ್ತದೆ, ಅದೇನೆಂದರೆ ಈ ರೀತಿ ಎದ್ದು ಒಟ್ಟಿಗೆ ಮಾತನಾಡಿದರೆ ಕಡತಕ್ಕೆ ಹೋಗುವುದಿಲ್ಲ. ಯಾರ ಹೆಸರನ್ನು ಅಧ್ಯಕ್ಷರು ಕರೆಯುತ್ತಾರೋ ಅವರು ಹೇಳಿದಂಥ ಮಾತುಗಳು ಮಾತ್ರ ರೆಕಾರ್ಡ್‌ಗೆ ಹೋಗುತ್ತವೆ.

ಆದುದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಒಬ್ಬರಿಗಿಂತ ಹೆಚ್ಚು ಸದಸ್ಯರು ಎದ್ದು ನಿಲ್ಲುವುದಿಲ್ಲ ಎಂದು ನನ್ನ ಭಾವನೆ. ಈಗ ಮಾನ್ಯ ಸದಸ್ಯರಾದ ಯಡಿಯೂರಪ್ಪನವರಿಗೆ ನಾನು ಸಾಕಾದಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಅವರು ಹೇಳುವಂಥ ವಿಚಾರಗಳನ್ನು ಮತ್ತೆ ಮತ್ತೆ ಪುನರ್ ಪ್ರತಿಪಾದನೆ ಮಾಡುತ್ತಲೇ ಇದ್ದಾರೆ. ಆದುದರಿಂದ ನಾನು ಸರ್ಕಾರದಿಂದ ಇದರ ಬಗ್ಗೆ ಉತ್ತರವನ್ನು ನಿರೀಕ್ಷಣೆ ಮಾಡುವುದಿಲ್ಲ, ಏಕೆಂದರೆ ಈ ನಿಲುವಳಿ ಸೂಚನೆಯನ್ನು ನಾನು ಅಂಗೀಕಾರ ಮಾಡಿಲ್ಲ. ಈಗ ಸದನದ ಮುಂದೆ ಯಾವ ಪ್ರಸ್ತಾಪವೂ ಇಲ್ಲ. ಇದಕ್ಕಾಗಿ ಬೇರೆ ಅವಕಾಶಗಳನ್ನು ಕೊಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಮಾನ್ಯ ಸದಸ್ಯರಿಗೆ ನಾನು ಕೊಡುತ್ತೇನೆ. ಈಗ ಮುಂದಿನ ಕಾರ್ಯಕ್ರಮಗಳಿಗೆ ತಾವುಗಳೆಲ್ಲರೂ ಅವಕಾಶ ಮಾಡಿ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ತಾವುಗಳು ಇದಕ್ಕೆ ಯಾವ ರೀತಿ ಅವಕಾಶ ಮಾಡಿಕೊಡುತ್ತೀರಿ ಎನ್ನುವುದರ ಬಗ್ಗೆ ಬಲವಂತ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ನನ್ನ ನಿಲುವಳಿ ಸೂಚನೆ ಬಗ್ಗೆ ಸರ್ಕಾರದ ನಿಲುವೇನು ಎನ್ನುವುದು ಗೊತ್ತಾಗಬೇಕು. ಏಕೆಂದರೆ ಇದು ಲಕ್ಷಾಂತರ ರೈತರಿಗೆ ಸಂಬಂಧಪಟ್ಟತಕ್ಕಂಥ ಪ್ರಶ್ನೆಯಾಗಿದೆ. ಇದರ ಬಗ್ಗೆ ಸಭಾನಾಯಕರ ಮನಸ್ಸಿನಲ್ಲಿ ಏನು ಇದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಈ ರಾಜ್ಯದ ರೈತರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ನಿಲುವೇನು ಎನ್ನುವುದು ಸ್ಪಷ್ಟವಾಗಬೇಕು.

ಶ್ರೀ ವೀರೇಂದ್ರ ಪಾಟೀಲ್ (ಮಾನ್ಯ ಮುಖ್ಯಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಒಂದು ಗಹನವಾದ ಪ್ರಶ್ನೆಯನ್ನು ಎತ್ತಿದ್ದಾರೆ. ನಾವೆಲ್ಲರೂ ರೈತರು, ನಾನೂ ರೈತ. ಇಲ್ಲಿ ಕುಳಿತಿರುವವರಲ್ಲಿ ನೂರಕ್ಕೆ ತೊಂಭತ್ತೈದರಷ್ಟು ಸದಸ್ಯರುಗಳು ರೈತರುಗಳೇ ಇದ್ದೇವೆ. ಆದಕ್ಕಾಗಿ ರೈತರ ಹಿತರಕ್ಷಣೆಯನ್ನು ಮಾಡತಕ್ಕಂಥ ಮನೋಪಲಿ ಕೆಲವರಿಗೆ ಮಾತ್ರ ಇದೆ ಎನ್ನತಕ್ಕಂಥ ರೀತಿಯಲ್ಲಿ ನೀವು ಚರ್ಚೆ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್,— ತಮಗೆ ಸಪೋರ್ಟ್ ಮಾಡುವುದಕ್ಕೋಸ್ಕರವಾಗಿ ನಿಂತಿದ್ದಾರೆ. ಹೆಜ್ಜೆ ಹೆಜ್ಜೆಗೂ ಪ್ರೋತ್ಸಾಹ ಕೊಡುತ್ತಿದ್ದಾರೆ, ಬಹಳ ಒಳ್ಳೆಯ ಸೆಟ್ ನಿಮ್ಮದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್,— ನೀವು ಒಳ್ಳೆಯವರನ್ನು ತಂದಿದ್ದೀರಿ.........

ಶ್ರೀ ವೀರೇಂದ್ರ ಪಾಟೀಲ್.— ಗಹನವಾದಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಆ ಕಡೆ ಕುಳಿತಂತಹ ಸದಸ್ಯರು ಇದರ ಬಗ್ಗೆ ತೀರ್ಮಾನ ಮಾಡಬೇಕೆಂದು ಹೇಳುತ್ತಿದ್ದಾರೆ. ಅವರೇ ಇಲ್ಲಿ ಕುಳಿತರೂ ಸಹ ಕ್ಷಣ ಇದರ ಬಗ್ಗೆ ತೀರ್ಮಾನ ಮಾಡುವ ಹಾಗಿಲ್ಲ. ಆ ಕಡೆ ಕುಳಿತಿರುವವರು ಈ ಪ್ರಶ್ನೆ ಬಗ್ಗೆ ಹೇಳಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ನಾವು ಚುನಾವಣಾ ಪ್ರಣಾಳಿಕೆಯಲ್ಲಿ ಜನರ ಮುಂದೆ, ಮತದಾರರ ಮುಂದೆ ನಮ್ಮ ಆಶ್ವಾಸನೆಗಳನ್ನು ಕೊಟ್ಟಿದ್ದೇವೆ. ಚುನಾವಣಾ ಪ್ರಣಾಳಿಕೆಯ ಮೂಲಕ ಯಾವ ಭರವಸೆಯನ್ನು ಕೊಟ್ಟಿದ್ದೇವೆ, ಅದು ಸೀಕ್ರೆಟ್ ಡಾಕ್ಯುಮೆಂಟ್ ಅಲ್ಲ. ಪ್ರತಿಯೊಬ್ಬರೂ ಅದನ್ನು ಓದಿಕೊಳ್ಳುತ್ತಾರೆ. ಅವರೆ ಇಂತಹ ಸಮಸ್ಯೆಗಳನ್ನು, ಅದರಲ್ಲೂ ಅತಿ ಗಹನವಾದಂತಹ ಸಮಸ್ಯೆಗಳನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಚರ್ಚೆ ಮಾಡುವುದು ಸ್ವಾಭಾವಿಕ, ಆ ಚರ್ಚೆಗೆ ನಾನು ಉತ್ತರ ಕೊಡುತ್ತೇನೆ. ಪ್ರತಿಯೊಂದು ಗಹನವಾದ ವಿಚಾರದ ಮೇಲೆ ಪ್ರಸ್ತಾಪ ಮಾಡುವುದಕ್ಕೆ, ಅದರ ಬಗ್ಗೆ ಸರ್ಕಾರದ ನಿಲುವು ಏನು ಇದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಅದಕ್ಕಾಗಿ ಇವತ್ತೇ ನೀವು ಕೇಳಿದ ತಕ್ಷಣ ಜವಾಬು ಕೊಡಿ ಎಂದು ನಿರೀಕ್ಷೆ ಮಾಡುವುದಾಗಲೀ ಅಥವಾ ಅಪೇಕ್ಷೆ ಪಡುವುದಾಗಲೀ ಮಾಡಬಾರದು. ಇಂತಹ ಗಹನವಾದ ವಿಚಾರಗಳನ್ನು ಎತ್ತಿದಾಗ ಅದಕ್ಕೆ ಉತ್ತರ ಕೊಡತಕ್ಕಂತಹ ಕಾಲದಲ್ಲಿ ಸಾಧಕ ಬಾಧಕಗಳನ್ನು ಪರಿಶೀಲನೆ ಮಾಡಿ ಸರ್ಕಾರ ಹೇಳುತ್ತದೆ. ಆದಕ್ಕಾಗಿ ನನ್ನ ಉತ್ತರ ದವರೆಗೂ ತಾವುಗಳು ಕಾಯಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಾವು ಹೇಳುವ ಹಾಗೆ ಇದರ ಬಗ್ಗೆ ದಿಢೀರ್ ಎಂದು ಉತ್ತರ ಕೊಡುವ ಹಾಗೆ ಇಲ್ಲ, ಅದನ್ನು ನಾನು ಒಪ್ಪುತ್ತೇನೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕ ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಂತಹ ಕಾಲದಲ್ಲಿ ಏಕಾಏಕಿಯಾಗಿ ಅದರ ಸಾಧಕ ಬಾಧಕಗಳನ್ನು ವಿಚಾರ ಮಾಡದೆ ಉತ್ತರ ಹೇಳುವುದಕ್ಕೆ ಬರುವುದಿಲ್ಲ. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಅನೇಕ ರಾಜ್ಯ ಸರ್ಕಾರಗಳು ಹಾಗೂ ಕಾಂಗ್ರೆಸ್ ಸರ್ಕಾರಗಳವರು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ತಾವು 10 ಸಾವಿರರೂಪಾಯಿಗಳವರೆಗೆ ರೈತರ ಸಾಲ ಮನ್ನಾ ಮಾಡುತ್ತೇವೆಂದುಹೇಳಿದ್ದೀರಿ. ಚುನಾವಣೆ ಈಗತಾನೇ ಆಗಿದೆ. ಇನ್ನೂ 5 ವರ್ಷ ನಮಗೆ ಸಮಯ ಇದೆ. ನಾವು ಯಾವತ್ತು ಬೇಕಾದರೂ ನನ್ನ ನಿರ್ಧಾರ ವನ್ನು ಮಾಡುತ್ತೇವೆಂದು ತಮ್ಮ ನಿಲುವು ಇರಬಹುದೆಂದು ಅನುಮಾನ ಬರುತ್ತದೆ. ಈಗ ನಿಮ್ಮ ನಿಲುವು ಹೇಳಿದರೆ, ಕೇಂದ್ರ ಸರ್ಕಾರ ಕೂಡ ಸಹಾಯ ಹಸ್ತ ಕೊಡುವುದಕ್ಕೆ ಸಿದ್ಧ ಇದೆ. ಕೇಂದ್ರ ಸರ್ಕಾರದವರು ಇದರ ಬಗ್ಗೆ ಕಾರ್ಯಕ್ರಮ ರೂಪಿಸುವುದಕ್ಕೆ ಸಿದ್ಧ ಇದ್ದಾರೆ. ನಾನು ವಿನಂತಿ ಮಾಡಿ ಕೊಳ್ಳುವುದೇನೆಂದರೆ ನಿಮಗೆ ರೈತರ ಸಾಲ ಮನ್ನಾ ಮಾಡುವುದಕ್ಕೆ ಇರತಕ್ಕ ತೊಂದರೆಗಳೇನು, ಅಡಚಣೆಗಳು ಏನು ಎಂದು. ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಕೇಳುತ್ತೇನೆ. ಡಿಸೆಂಬರ್ ಒಳಗೆ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ......

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ತಾರೀಖು 29ರಂದು ಉತ್ತರ ಕೊಡುತ್ತಾರೆ. ಆಗಲೂ ಸಹ ಡಿಸೆಂಬರ್ ತಿಂಗಳು ಮುಗಿದಿರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಮ್ಮ ಸರ್ಕಾರದ ನಿಲುವು ಬಗ್ಗೆ ಕೇಳುತ್ತೇನೆ. ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ತಾವುಗಳು ಅಧಿಕಾರಕ್ಕೆ ಬಂದಿದ್ದೀರಿ. ಇದರ ಬಗ್ಗೆ ನಿಮ್ಮ ನಿಲುವು ಹೇಳಬೇಕು, ರಾಜ್ಯಪಾಲರ ಭಾಷಣದಲ್ಲಿ ಇದರ ಬಗ್ಗೆ ಪ್ರಸ್ತಾಪ ಇಲ್ಲ. ಒಂದೊಂದು ದಿವಸ ಸಹ ನಿಧಾನವಾದರೂ ರೈತನು ನಷ್ಟವನ್ನು ಅನುಭವಿಸುತ್ತಾನೆ. ರೈತರ ಸಾಲ ಮನ್ನಾ ಮಾಡುತ್ತೇವೆನ್ನುವ ಆಶ್ವಾಸನೆ ಬಗ್ಗೆ ತಮ್ಮ ನಿಲುವು ಹೇಳಬೇಕು. ಏಕೆಂದರೆ ನಮ್ಮ ತಾಲ್ಲೂಕಿಗೆ ಹೋದರೆ ರೈತರು ನಮ್ಮನ್ನು ಬಿಡುವುದಿಲ್ಲ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ರೈತರ ಸಾಲ ಮನ್ನಾ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟ ಮಾಡಬೇಕು.........

(ಗೊಂದಲ)

(ಸರ್ಕಾರದ ನಿಲುವನ್ನು ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯಿಸುತ್ತಾ ಮಾನ್ಯ ಸದಸ್ಯರುಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಬಾಬು ಗೌಡ ಪಾಟೀಲ್ ಎಂ. ಪಿ. ವೆಂಕಟೇಶ್, ವೀರಕುಮಾರ ಪೂಜಾರಿ, ನಾರಾಯಣರಾವ್ ಮನವಳ್ಳಿ ಅವರುಗಳು ವೆಲ್‌ಗೆ ಬಂದು ನಿಂತುಕೊಂಡರು)

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಬಿ.ಎ. ಯಡಿಯೂರಪ್ಪನವರು ಸದನದ ವೆಲ್‌ನಲ್ಲಿ ನಿಂತು ಮಾತನಾಡುತ್ತಿದ್ದರು. ಅದನ್ನು ರಿಕಾರ್ಡ್ ಮಾಡಬಾರದೆಂದು ಮಾನ್ಯ ಅಧ್ಯಕ್ಷರು ಆದೇಶಿಸಿದರು).

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಯಾರು ವೆಲ್‌ನ ಒಳಗೆ ಬಂದಿದ್ದಾರೋ ಅವರಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ನಿನ್ನೆತಾನೆ ಪ್ರಮಾಣವಚನ ಸ್ವೀಕಾರ ಮಾಡಿ ರಾಜ್ಯಾಂಗದ ಚೌಕಟ್ಟಿನಲ್ಲಿ ವಿಧಾನಸಭೆಯನ್ನು ನಡೆಸಿಕೊಂಡು ಹೋಗುತ್ತೇವೆ ಎಂದು ಜನತೆಗೆ ವಚನ ಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳಾದರೂ ಹೇಳಿದ್ದು ದು ಏನೆಂದರೆ, ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ನಡೆಯುವ ಚರ್ಚೆಯ ಎಲ್ಲಾ ವಿಚಾರಗಳಿಗೂ ನಾನು ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ ಇವತ್ತು ಚರ್ಚೆ ಪ್ರಾರಂಭವಾಗುತ್ತದೆ ಎರಡು ಗಮನ ಸೆಳೆಯುವ ಸೂಚನೆಗಳು ಆದಮೇಲೆ ಈ ಸದನದ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಆ ನಿರ್ಣಯವನ್ನು ಮಂಡಿಸುತ್ತಾರೆ. ಅನಂತರ ವಿರೋಧಪಕ್ಷದ ನಾಯಕರು ಹಾಗೂ ನೀವೆಲ್ಲರೂ ಅದರ ಬಗ್ಗೆ ಭಾಷಣ ಮಾಡತಕ್ಕಂಥ ಅವಕಾಶ ಇದೆ. ಆ ಅವಕಾಶವನ್ನು ಉಪಯೋಗಿಸಿಕೊಂಡು ನೀವು ನಿಮ್ಮ ವಿಚಾರಗಳನ್ನು ನಿಮ್ಮ ಧೋರಣೆಯನ್ನು ನಿಮ್ಮ ಟೀಕೆಯನ್ನು ಮಾಡತಕ್ಕಂಥ ಅವಕಾಶ ಇದೆ. ಆ ಅವಕಾಶವನ್ನು ಉಪಯೋಗಿಸಿಕೊಳ್ಳದೆ

ಈಗಲೇ ಸರ್ಕಾರದ ಪರವಾಗಿ ಉತ್ತರ ಹೇಳಬೇಕು ಎನ್ನತಕ್ಕಂಥ ಮನೋಭಾವ ಏನಿದೆ ಆ ಮನೋಭಾವದಿಂದ ನಾವು ನಿನ್ನೆ ಸೌಹಾರ್ದದಿಂದ ಈ ಮನೆಯ ಕೆಲಸವನ್ನು ಏನು ಪ್ರಾರಂಭ ಮಾಡಿದ್ದೇವೆ ಆ ಸೌಹಾರ್ದಕ್ಕೆ ಭಂಗ ಬರುತ್ತದೆ ಎಂದು ತಮಗೂ ಅನಿಸಿರಬೇಕು. ಆದುದರಿಂದ ತಾವು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತು ಈ ವಿಚಾರವನ್ನು ಚರ್ಚೆ ಮಾಡಬೇಕು ಎಂದು ತಮ್ಮಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಇನ್ನೊಂದು ವಿಚಾರ ಹೇಳಿದರು. ನಾವು ನಮ್ಮ ಕ್ಷೇತ್ರಗಳಿಗೆ ಹೋದರೆ ನಮ್ಮನ್ನು ಜನ ಬಿಡುವುದಿಲ್ಲ ಎಂದು ಹೇಳಿದರು. ನೀವು ನಿಮ್ಮ ಕ್ಷೇತ್ರಗಳಿಗೆ ಹೋಗುವುದರೊಳಗೆ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವು ಇವತ್ತೇ ನಿಮ್ಮ ಕ್ಷೇತ್ರಗಳಿಗೆ ಹೋಗುವುದಿಲ್ಲ.

(ಮಾನ್ಯ ಸದಸ್ಯರಾದ ಬಿ.ಎಸ್. ಯಡಿಯೂರಪ್ಪನವರು ವೆಲ್‌ನಲ್ಲಿ ನಿಂತು ಮಾತನಾಡುತ್ತಿದ್ದರು).

ಅಧ್ಯಕ್ಷರು.— ಹಿಂದಿನ ಸರ್ಕಾರಗಳು ಏನು ಮಾಡಿವೆ ಎನ್ನತಕ್ಕಂಥಾದ್ದು ನಮಗೆ ಅಪ್ರಕೃತ. ಈ ಸರ್ಕಾರ ಏನು ಮಾಡುತ್ತದೆ ಏನು ಭರವಸೆ ಕೊಟ್ಟಿದೆ ಅದು ಮಾತ್ರ ಇಲ್ಲಿ ಪ್ರಕೃತ. ಆದುದರಿಂದ ಮುಖ್ಯಮಂತ್ರಿಗಳು ಈಗಾಗಲೇ, ನಾನು ಎಲ್ಲಾ ವಿಚಾರಗಳಿಗೂ ಉತ್ತರ ಕೊಡುತ್ತೇನೆ, ನಾನು ಚರ್ಚೆಗೆ ಅನುವು ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ. ಭರವಸೆಯನ್ನು ಗಮನದಲ್ಲಿಟ್ಟುಕೊಂಡು ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ವೆಲ್‌ನಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು.— ಮೊದಲು ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

(ಮಾನ್ಯ ಮುಖ್ಯಮಂತ್ರಿಗಳು ಸಭೆಯಿಂದ ನಿರ್ಗಮಿಸಿದರು)

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಮುಖ್ಯಮಂತ್ರಿಗಳು ಹೊರಗೆ ಹೋಗುತ್ತಿದ್ದಾರೆ ಅವರನ್ನು ಕರೆಯಿಸಿ ಮುಖ್ಯಮಂತ್ರಿಗಳು ಇದರಲ್ಲಿ ಭಾಗವಹಿಸಬೇಕು.

ಅಧ್ಯಕ್ಷರು.— ನಾನು ಮಾನ್ಯ ಯಡಿಯೂರಪ್ಪನವರು ಮತ್ತಿತರ ಸದಸ್ಯರಲ್ಲಿ ಸೂಚನೆ ಕೊಡ ಬಯಸತಕ್ಕಂಥಾದ್ದು ಏನೆಂದರೆ, ತಾವು ಅಲ್ಲಿ ನಿಂತು ಮಾತನಾಡಿದರೆ ಅದು ಯಾವುದೂ ಕೂಡ ಕಡತಕ್ಕೆ ಹೋಗುವುದಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ವೆಲ್‌ನಲ್ಲಿ ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಇಂತಹ ಮಹತ್ವದ ಚರ್ಚೆ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳು ಹೊರಗಡೆ ಹೋಗುವುದು ಸರಿಯೇ? ಮುಖ್ಯಮಂತ್ರಿಗಳನ್ನು ಸಭೆಗೆ ಕರೆಯಿಸಿ. ಇಲ್ಲಿ ಗುರುತರವಾದ ಪ್ರಶ್ನೆಯ ಬಗ್ಗೆ ಚರ್ಚೆ ನಡೆಯುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಸದನದಲ್ಲಿ ಪರಂಪರೆಗಳು ಇವೆ. ನಮ್ಮನ್ನು ಕುಳಿತು ಕೊಳ್ಳಿಯೆಂದು ಸಭಾಪತಿಯವರು ಹೇಳುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಇಲ್ಲಿ ಕುಳಿತಾಗ ಸ್ಪೀಕರ್‌ರವರನ್ನು ಎಳೆದಾಡಿದ ಪ್ರಸಂಗಗಳು ಉಂಟು.

(ಗೊಂದಲ)

ಶ್ರೀ ಎ. ಬಿ. ಜಕನೂರ್.— ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವುದರಿಂದ ನಿಮಗೆ ಸೊಕ್ಕು ಬಂದಿದೆ ಎಂದು ಹೇಳಿದ್ದಾರೆ. ಅದಕ್ಕೆ ಅವರು ಕ್ಷಮೆ ಕೇಳಬೇಕು.

ಅಧ್ಯಕ್ಷರು.— ಅವರು ಹೇಳಿದ್ದುದು ಯಾವುದೂ ಕಡತಕ್ಕೆ ಹೋಗದೆ ಇರುವಾಗ ಕ್ಷಮೆ ಕೇಳತಕ್ಕ ಪ್ರಶ್ನೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ, ರಾಜ್ಯದ ಮುಖ್ಯಮಂತ್ರಿಗಳನ್ನು ಕರೆಯಿಸಿ ಇಲ್ಲಿ ಪರಿಸ್ಥಿತಿ ಏನು ಉದ್ಭವವಾಗಿದೆ ಅದರ ಬಗ್ಗೆ ಅವರು ಉತ್ತರ ಕೊಡಲಿ.

ಅಧ್ಯಕ್ಷರು.— ಚರ್ಚೆಗೆ ನಾನು ಇನ್ನು ಅವಕಾಶವನ್ನು ಕೊಟ್ಟಿಲ್ಲ, ಚರ್ಚೆ ಮಾಡಬೇಕೇ, ಹೇಗೆ ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ, ಸಂಸದೀಯ ಮಂತ್ರಿಗಳು ಉಪದೇಶ ಹೇಳುತ್ತಿದ್ದಾರೆ. ಅವರ ಉಪದೇಶ ನಮಗೆ ಬೇಡ. ಅವರ ಸಂಪ್ರದಾಯ ನಮಗೆ ಬೇಡ. ನಮಗೆ ಬೇಕಾಗಿರುವುದು ಮುಖ್ಯಮಂತ್ರಿಗಳನ್ನು ಕರೆಯಿಸುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ನಾನು ಒಳಗಡೆ ಇದ್ದಾಗ ಸೊಕ್ಕಿನಿಂದ ಮೆರೆಯುತ್ತಿದ್ದೀರೆಂದು ಹೇಳಿದ್ದೆ. ಈಗ ನನ್ನ ಆಸನದಲ್ಲಿ ನಿಂತು ನಿಮಗೆ ಬಹುಮತ ಬಂದಿರುವುದರಿಂದ ಸೊಕ್ಕಿನಿಂದ ಮೆರೆಯುತ್ತಿದ್ದೀರೆಂದು ಹೇಳುತ್ತಿದ್ದೇನೆ. ನಿಮಗೆ ರಾಜ್ಯದ ರೈತರು ಬುದ್ಧಿ ಕಲಿಸುತ್ತಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಸಾಲ ಮನ್ನಾ ಮಾಡದೆ ಇದ್ದರೆ ವಿಧಾನಸೌಧಕ್ಕೆ ರೈತರು ಮುತ್ತಿಗೆ ಹಾಕುತ್ತಾರೆ. ಓಟು ತೆಗೆದುಕೊಂಡು ಒಂದು ರೈತರ ಸಮಸ್ಯೆ ಬಗ್ಗೆ ಗಮನ ಕೊಡದೇ ಹೋದರೆ ಹಳ್ಳಿಗಳಿಗೆ ಹೋದಾಗ ಸರಿಯಾದ ಶಿಕ್ಷೆ ಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಿ. ಮಾನ್ಯ ಸದಸ್ಯರುಗಳಲ್ಲಿ ನನ್ನ ಸವಿನಯ ವಿನಂತಿ ಏನೆಂದರೆ ಸದನ ನಿನ್ನೆ ಪ್ರಾರಂಭವಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಬೇಕಾಗಿದೆ. ಯಡಿಯೂರಪ್ಪನವರು ಯಾವ ರೀತಿ ಒಳಗಡೆ ಬಂದು ಮಾತನಾಡಿದ್ದಾರೆ. ಆ ವಿಚಾರದಲ್ಲಿ ನಮ್ಮ ಕಡೆಯಿಂದ ಪ್ರಚೋದನೆಯಾಗಿಲ್ಲ. ಮಾನ್ಯ ಸಭಾ ನಾಯಕರು ೨೯ನೇ ತಾರೀಖಿನೊಳಗೆ ಉತ್ತರ ಕೊಡುವಾಗ ಈ ವಿಚಾರದ ಬಗ್ಗೆ ಹೇಳುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದಾರೆ. ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ನಾವು ಮಾಡುವುದಿಲ್ಲ ಅಂದರೆ ತಾವು ವೆಲ್‌ನ ಒಳಗೆ ಬರತಕ್ಕ ಪ್ರಚೋದನೆ ಇತ್ತು, ಈ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅರ್ಥ ಇತ್ತು. ಇವೊತ್ತು ಆ ರೀತಿಯ ಯಾವ ಒಂದು ಪ್ರಚೋದನೆ ಇಲ್ಲದೆ ಈ ರೀತಿ ಮಾಡುವುದು ಸರಿಯಲ್ಲ. ನಾಲ್ಕು ಕೋಟಿ ಜನರ, ರೈತರ ಯಾವ ಆಸೆಗಳು ಇವೆ, ನಿರೀಕ್ಷೆಗಳು ಇವೆ ಅವುಗಳನ್ನು ಚರ್ಚೆ ಮಾಡಲಿಕ್ಕೆ ಇಲ್ಲಿ ಬಂದಿದ್ದೇವೆ. ಅವರ ಒಂದು ಆಸೆ, ನಿರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಅವರ ಆಶೋತ್ತರಗಳನ್ನು ಈಡೇರಿಸಲಿಕ್ಕೆ ವಿಚಾರ ಚರ್ಚೆ ಆಗಬೇಕಾಗುತ್ತದೆ. ಅದಕ್ಕೆ ಸ್ಪಂದಿಸಿ ಸರ್ಕಾರ ಕೆಲಸವನ್ನು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ತಾವು ಹೇಳಿದ್ದೇ ಆಗಬೇಕೆಂದರೆ ಹೇಗೆ. ತಾವು ಏನು ಹೇಳಿದ್ದೀರಿ ಅದರ ಬಗ್ಗೆ ನಾವು ನಕಾರ ಹೇಳಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಮೊಯಿಲಿಯವರು ಉತ್ತರ ಹೇಳಲಿಕ್ಕೆ ಪ್ರಾರಂಭ ಮಾಡಿದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.— ಇವೊತ್ತು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ರೈತರ ಬಗ್ಗೆ ಎಷ್ಟು ಕಳಕಳಿ ವ್ಯಕ್ತಪಡಿಸಿ ಹೇಳಿದ್ದಾರೆ ಅದಕ್ಕಿಂತಲೂ ನೂರು ಪಟ್ಟು ರೈತರ ಬಗ್ಗೆ ಕಳಕಳಿ ನಮ್ಮ ಪಕ್ಷಕ್ಕೂ ಇದೆ. ರೈತರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಬಂದಂಥ ತಾವು ಅವರ ಆಶೋತ್ತರಗಳ ಬಗ್ಗೆ ಯಾವ ಮಾತುಕತೆಯನ್ನು ಆಡದೆ ಸದನದ ಕಾರ್ಯಕಲಾಪ ನಡೆಸುವುದರಲ್ಲಿ ಈ ರೀತಿ ಮಾಡಿದರೆ ರೈತರ ಆಶೀರ್ವಾದ ತಮ್ಮ ಕಡೆ ಇಲ್ಲ ಎಂದು ನಾನು ಹೇಳಬೇಕಾಗುತ್ತದೆ. ರೈತರ ಸಮಸ್ಯೆಗಳು ಅಂದರೆ ಸಾಲದ ಮನ್ನಾ ಸಮಸ್ಯೆ ಒಂದೇ ಅಲ್ಲ ಅವರು ಬೆಳೆದಂಥ ಬೆಳೆಗಳ ಬೆಲೆ ಸಮಸ್ಯೆ ಇದೆ. ಅದೇ ರೀತಿ ನೂರಾರು ಸಮಸ್ಯೆಗಳು ಇವೆ. ಅದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ ಅದಕ್ಕೆ ಸರ್ಕಾರ ಸ್ಪಂದಿಸಬೇಕಾಗುತ್ತದೆ. ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಮಾನ್ಯ ಸದಸ್ಯರು ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳು ಜವಾಬ್ದಾರಿಯಿಂದ ನುಣುಚಿಕೊಂಡು ಹೋಗಿದ್ದಾರೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು ಹೋಗಿಲ್ಲ, ವಿಧಾನ ಪರಿಷತ್ತಿನಲ್ಲಿ ಅವರ ಬಿಸಿನೆಸ್‌ಗೆ ಸಂಬಂಧಪಟ್ಟ ಕಾರ್ಯಕ್ರಮ

ಇದ್ದುದರಿಂದ, ವಿಧಾನ ಪರಿಷತ್ತಿನ ಸಭೆಗೆ ಹೋಗಿದ್ದಾರೆ. ರೈತರ ಬೇಡಿಕೆಗಳ ಬಗ್ಗೆ ಸರ್ಕಾರ ಸರಿಯಾದ ಉತ್ತರವನ್ನು ಕೊಡದೇ ಇದ್ದರೆ ತಾವು ವೆಲ್ ಬಳಿ ಬರುವುದು ಸರಿ. ಸರ್ಕಾರ ರೈತರ ಬಗ್ಗೆ ಒಂದೆರಡು ದಿವಸಗಳಲ್ಲಿ ಉತ್ತರವನ್ನು ಕೊಡುತ್ತೇವೆಂದು ಹೇಳಿದರೂ ಸಹ ತಾವು ಸಿಟ್ಟಿನಿಂದ ಎದ್ದು ವೆಲ್ ಕಡೆ ಬಂದಿರುವುದು ಸರಿಯಲ್ಲ. ತಾವು ಸದನದ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಸಹಕಾರ ಕೊಡಬೇಕು. ರೈತರ ಪ್ರತಿನಿಧಿಗಳಾಗಿ ಬಂದ ಮೇಲೆ ರೈತರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ತಾವು ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಒಪ್ಪಿಕೊಳ್ಳಿ.

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.— ಸರ್ಕಾರದ ಖಜಾನೆ ಖಾಲಿಯಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ, ರೈತರ ಸಮಸ್ಯೆಗಳ ಬಗ್ಗೆ...

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧ್ಯಕ್ಷರೆ...

ಅಧ್ಯಕ್ಷರು.— ಈಗ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಮಾತನಾಡಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧ್ಯಕ್ಷರೆ...

ಅಧ್ಯಕ್ಷರು.— ನಾನು ತಮ್ಮನ್ನು ಕರೆಯುತ್ತೇನೆ ಈಗ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ...

SRI B. RAJUGOWDA.—The House is not in order.

MR. SPEAKER.—The House is in order. The Hon'Minister for Parliamentary Affairs has spoken.

ಶ್ರೀ ಬಸವರಾಜ್ ರಾಯರೆಡ್ಡಿ.—ಮಾನ್ಯ ಅಧ್ಯಕ್ಷರೆ, ಕೆಲವರು ಹೊಸದಾಗಿ ಸದಸ್ಯರಾಗಿ ಬಂದಿದ್ದಾರೆ, ಅವರಿಗೆ ಶಿಸ್ತನ್ನು ಕಲಿಸಬೇಕಾಗುತ್ತದೆ...

ಅಧ್ಯಕ್ಷರು.—ಮಾನ್ಯ ಸದಸ್ಯರ ಸಲಹೆ ಸೂಕ್ತವಾದುದು. ಮಾನ್ಯ ರೆಡ್ಡಿಯವರ ಸಲಹೆ ಸ್ವಾಗತಾರ್ಹ. ಶಿಸ್ತನ್ನು ಕಲಿಸಬೇಕಾಗುತ್ತದೆ. ಈಗ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು...

ಶ್ರೀ ಬಿ.ಎಸ್. ಯಡಿಯೂರಪ್ಪ.—ಇವೊತ್ತು ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು. ೪೨ ವರ್ಷಗಳ ಸಮಸ್ಯೆ ಇದೆ...

ಅಧ್ಯಕ್ಷರು.—ಈ ಸಭೆಯಲ್ಲಿ ೨೨೧ ಜನ ಸದಸ್ಯರಿದ್ದಾರೆ. ಆ ೨೨೧ ಜನ ಮಾನ್ಯ ಸದಸ್ಯರಿಗೂ ಸಮಾನವಾದ ಹಕ್ಕುಬಾಧ್ಯತೆಗಳಿವೆ. ಆದರೆ ಇಲ್ಲಿ ೫ ಜನ ಮಾನ್ಯ ಸದಸ್ಯರುಗಳು ಈ ದಿವಸ ಈ ಸದನದಲ್ಲಿ ಇಂಥಾದ್ದೇ ಮಾಡಬೇಕು, ಇಂಥಾದ್ದೇ ಆಶ್ವಾಸನೆಯನ್ನು ಕೊಡಬೇಕು, ಇಂಥಾದ್ದೇ ನಿರ್ಣಯ ಆಗಬೇಕೆಂದು ಹೇಳತಕ್ಕದ್ದರ ಔಚಿತ್ಯವನ್ನು ಜನರು ಗಮನಿಸಬೇಕು, ತಾವೂ ಗಮನಿಸಬೇಕು...

(ಗೊಂದಲ)

ಅಧ್ಯಕ್ಷರು.—ಈಗ ವಿರೋಧಪಕ್ಷದ ಉಪನಾಯಕರು ಮಾತನಾಡಬೇಕು...

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ತಾವು ನನಗೆ ಅವಕಾಶವನ್ನು ಕೊಡಬೇಕು. ಕಾಂಗ್ರೆಸ್‌ನವರು ನನಗೆ ಮಾತನಾಡಲು ಅವಕಾಶವನ್ನು ಕೊಡುತ್ತಿಲ್ಲ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಇಂಥ ಒಂದು ಗುರುತರವಾದ ಪ್ರಶ್ನೆಯನ್ನು ಮಾನ್ಯ ಯಡಿಯೂರಪ್ಪನವರು ಎತ್ತಿದ್ದಾರೆ. ಇಲ್ಲಿ ಕಾನೂನು ಚೌಕಟ್ಟಿನ ವಿಚಾರದಲ್ಲಿ ಮಾತನಾಡಬೇಕೆಂಬುದರ ಬಗ್ಗೆ ಯಾರಿಂದಲೂ ನಾವು ಉಪದೇಶವನ್ನು ಪಡೆಯಬೇಕಾಗಿಲ್ಲ. ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಕಳಕಳಿಯಿಂದ ಈ ಸದನದಲ್ಲಿ ಚರ್ಚೆ ನಡೆಯುತ್ತಿರುವಾಗ ಮಾನ್ಯ ಮುಖ್ಯ ಮಂತ್ರಿಯವರು ಆ ಚರ್ಚೆಯನ್ನು ಆಲಿಸಿ, ಚರ್ಚೆಯನ್ನು ಅರ್ಧ ಕೇಳಿ, ಚರ್ಚೆಯ ಮಧ್ಯದಲ್ಲಿ ಎದ್ದು ಹೋಗಿದ್ದಾರೆ...

ಅಧ್ಯಕ್ಷರು.—ವಿಧಾನ ಪರಿಷತ್ತಿನಲ್ಲಿ ಕಾರ್ಯಕಲಾಪ ನಡೆಯುತ್ತಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆಂದು ಹೇಳಿದ್ದಾರೆ...

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಅಲ್ಲಿ ಮತ್ತೊಬ್ಬ ನಾಯಕರಿದ್ದಾರೆ...

(ಗೊಂದಲ)

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಸಂಸದೀಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ತಾವು ಈ ವಿಷಯವನ್ನು ಇಲ್ಲಿಗೇ ಬಿಟ್ಟು ಸದನದ ಬೇರೆ ಕಾರ್ಯಕಲಾಪಗಳಿಗೆ ಅನುವು ಮಾಡಿಕೊಡಬೇಕು. ಸದನದ ಮುಂದೆ ಇನ್ನೂ ಬೇರೆಬೇರೆ ಕಾರ್ಯಕ್ರಮಗಳು ಇರುವುದರಿಂದ ಅವುಗಳಿಗೆ ಅನವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಕುಳಿತು ಇಂಥ ಗುರುತರವಾದ ಚರ್ಚೆಯಲ್ಲಿ ಭಾಗವಹಿಸಬೇಕಾಗಿತ್ತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳನ್ನು ದಯವಿಟ್ಟು ಸಭೆಗೆ ಕರೆಯಿಸಿ. ಮಾನ್ಯ ಮುಖ್ಯಮಂತ್ರಿಗಳು ಏಕಾಏಕಿ ಚರ್ಚೆಯನ್ನು ಬಿಟ್ಟು ಹೋದುದು ಸರಿಯಲ್ಲ. ಇಂಥ ದಿವಸ ಈ ಚರ್ಚೆಯನ್ನು ತೆಗೆದುಕೊಳ್ಳಲಾಗುತ್ತದೆಂದು ಆಶ್ವಾಸನೆ ಕೊಡಿ...

ಅಧ್ಯಕ್ಷರು.—ಈಗ ಮಾನ್ಯ ವಿರೋಧಪಕ್ಷದ ಉಪ ನಾಯಕರು ಮಾತನಾಡಬೇಕು...

೧೨-೩೦ ಪಿ.ಎಂ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಒಂದು ಪ್ರಶ್ನೆ ಇದೆ. ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮತ್ತಿತರ ಸದಸ್ಯರಿಂದ ಒಂದು ನಿಲುವಳಿ ಸೂಚನೆ ಈ ಸಭೆಯ ಮುಂದೆ ಬಂದಿದೆ. ಆ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬೇಕು, ಅದು ಪ್ರಸ್ತಾಪ ಆಗಬೇಕು. ಮಾನ್ಯ ಸಭಾನಾಯಕರು ಇಲ್ಲಿದ್ದರು, ಇದರ ಬಗ್ಗೆ ನಾವು ೩-೪ ಜನ ಸದಸ್ಯರು ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಇದನ್ನು ನಾನು ಕಾಲಿಂಗ್ ಅಟೆನ್‌ಷನ್ ಆಗಿ ಕನ್ವರ್ಟ್ ಮಾಡುತ್ತೇನೆಂದು ತಾವು ಹೇಳಿದಿರಿ. ಮಾನ್ಯ ಸಭಾನಾಯಕರು ಇದನ್ನು ಒಪ್ಪಿಕೊಂಡು ಇದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಕನ್ವರ್ಟ್ ಮಾಡಬೇಕೆಂದು ಸಲಹೆಯನ್ನು ಕೊಟ್ಟರು. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈಗ ಅದೇ ಒಂದು ಔದಾರ್ಯವನ್ನು ಬಹುಶಃ ಈ ವಿಚಾರದ ಬಗ್ಗೆ ಹೇಳಿದ್ದರೆ ಅವರು ಈ ರೀತಿ ಹೋರಾಟಕ್ಕೆ ಬರುತ್ತಿರಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ತಾವು ೧೭೭ ಜನ ಗೆದ್ದು ಬಂದಿದ್ದೇವೆಂದು, ಜನರ ತೀರ್ಮಾನಕ್ಕೆ ನಾವು ಒಪ್ಪಿಕೊಂಡಿದ್ದೇವೆಂದು ನೀವು ಕುಳಿತುಕೊಳ್ಳಿ ಎಂದು ಹೇಳುವುದಾದರೆ ನಾವು ಸಭೆಯನ್ನು ಬಿಟ್ಟು ಹೋಗುತ್ತೇವೆ. ನೀವೆ ಸಭೆಯನ್ನು ನಡೆಸಿಕೊಳ್ಳಿ. ಈ ರೀತಿ ೧೫-೨೦ ಜನ ಎದ್ದು ನಿಂತು ಮಾತನಾಡಿ ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಏನು ಅರ್ಥ, ನೀವು ಗೆದ್ದು ಬಂದಿರುವಂತೆ ನಾವು ನಮ್ಮ ಕ್ಷೇತ್ರದಲ್ಲಿಯೂ ಗೆದ್ದು ಬಂದಿದ್ದೇವೆ. ನಮಗೆ ಮಾತನಾಡಲು ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೇ ನೀವೇ ನೋಡಿ ಅವರ ವ್ಯವಹಾರಗಳನ್ನು.

ಅಧ್ಯಕ್ಷರು.—ಆ ವ್ಯವಹಾರಗಳನ್ನು ನೀವು ಕೂಡ ನೋಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಅದನ್ನು ಡಿಫೆಂಡ್ ಮಾಡುವುದಕ್ಕೆ ಬರುತ್ತಿಲ್ಲ. ಇವೊತ್ತು ರೈತರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯಾವ ರೀತಿ ವಿರೋಧಪಕ್ಷದ ನಾಯಕರು ಎತ್ತಿರತಕ್ಕ

ವಿಚಾರವನ್ನು ನಾಳೆ ಕಾಲಿಂಗ್ ಅಟೆನ್‌ಷನ್ ಆಗಿ ಕನ್‌ವರ್ಟ್ ಮಾಡಿ ಉತ್ತರ ಕೊಡುತ್ತೇವೆಂದು ಹೇಳಿದರು ಅದೇರೀತಿಯಲ್ಲಿ ತಾವು ಸಹಿತ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರೆ. ಅವರು ವೆಲ್‌ಗೆ ಬರುತ್ತಲೇ ಇರಲಿಲ್ಲ. ಅದಕ್ಕೆ ಬದಲಾಗಿ ಮಾನ್ಯ ವಾರ್ತಾ ಸಚಿವರು ಏನು ಒಂದು ವಿವರಣೆ ಕೊಟ್ಟಿದ್ದಾರೆ ಅದು ಅನಗತ್ಯವೆಂದು ನಾನು ತಿಳಿದುಕೊಂಡಿದ್ದೇನೆ. ನೀವೇ ರೈತರ ಪರವಾಗಿ ಇರುವುದಿಲ್ಲ. ನಾವೂ ಸಹಿತ, ರೈತರ ಪರವಾಗಿ ಇದ್ದೇವೆಂದು ಹೇಳಬೇಕಾಗುತ್ತದೆ. ಮಾನ್ಯ ಸಭಾನಾಯಕರು ಹೇಳಿರುವಂತೆ ಆಶ್ವಾಸನೆ ಕೊಟ್ಟಿರುವಂತೆ ತಾವೂ ಒಂದು ಭರವಸೆಯನ್ನು ಕೊಡಿ. ಅವರು ಬಂದು ವಾಪಸ್ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಉತ್ತರವನ್ನು ಕೊಡುವ ಸಂದರ್ಭದಲ್ಲಿ ಇದಕ್ಕೆ ಉತ್ತರವನ್ನು ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ಹೊರತುಪಡಿಸಿ ಇದಕ್ಕೆ ವಿಶೇಷವಾದ ಒಂದು ಸಂದರ್ಭ ಕೊಡುತ್ತೇವೆಂದು ಹೇಳಿ ಅವರಿಗೆ ಒಂದು ಸಮಯದ ಅವಕಾಶವನ್ನು ಕೊಡಿ. ಸಾಧ್ಯವಾದರೆ ಇವೊತ್ತೇ ಕೊಡಿ. ಅವರು ವಾಪಸ್ ತಮ್ಮ ಸ್ಥಾನಕ್ಕೆ ಹೋಗುತ್ತಾರೆ. ಈ ಸಮಸ್ಯೆಯ ಬಗ್ಗೆ ನಮಗೆಲ್ಲರಿಗೂ ಕಾಳಜಿ ಇದೆ. ಅವರಿಗೆ ಸಮಯದ ಅವಕಾಶವನ್ನು ಕೊಡಿ ಅವರು ತಮ್ಮ ಬಹಿಷ್ಕಾರವನ್ನು ವಾಪಸ್ ತೆಗೆದುಕೊಳ್ಳುತ್ತಾರೆ. ಇಷ್ಟನ್ನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಯಡಿಯೂರಪ್ಪನವರು ಮತ್ತು ವಾಟಾಳ್ ನಾಗರಾಜ್‌ರವರು ಹೇಳಿರತಕ್ಕಂಥ ವಿಚಾರ ಬಹಳ ಗಂಭೀರವಾದಂಥ ವಿಚಾರ. ಆದರೂ ಸಹಿತ ನಾನು ಒಂದು ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ವಿರೋಧಿ ಸ್ಥಾನದಲ್ಲಿ ಕುಳಿತು ಅಧಿಕಾರ ನಡೆಸಿದವರು ಯಾರು ಇದ್ದಾರೋ, ಅವರ ಸರ್ಕಾರ ಉಳಿಯುವುದಕ್ಕೆ ಕಳೆದ ಏಳು ವರ್ಷಗಳಿಂದ ಸತತವಾಗಿ ಬೆಂಬಲಕೊಟ್ಟುಕೊಂಡು ಏನು ಅವಕಾಶ ಮಾಡಿಕೊಂಡು ಬಂದರೋ, ಅವರಿಗೆ ಈರಾಜ್ಯದಲ್ಲಿ ಒಂದು ಕರಾಳ ಶಾಸನವನ್ನು ಮಾಡಿದರು. ರೈತರ ಸಾಲವನ್ನು ಕಟ್ಟದೆಹೋದರೆ ಅವರು ಜಮೀನನ್ನು ಹರಾಜು ಹಾಕತಕ್ಕಂಥ ಒಂದು ಕರಾಳ ಶಾಸನವನ್ನು ಮಾಡಿದಾಗ ಇಡೀ ರಾಜ್ಯದ ೩-೪ ಲಕ್ಷ ಜನ ರೈತರು ಕಾಲುನಡಿಗೆಯಲ್ಲಿ ಬಂದು ಕಬ್ಬನ್‌ಪಾರ್ಕಿನಲ್ಲಿ ಕುಳಿತಾಗ ಅವರನ್ನು ನೋಡಿ ಮಾತನಾಡಿಸತಕ್ಕಂಥ ಸೌಜನ್ಯ ಇವರಿಗೆ ಯಾರಿಗೂ ಬರಲಿಲ್ಲ. ಆಳತಕ್ಕಂಥವರಿಗಾಗಲಿ ಅಥವಾ ಅವರಿಗೆ ಸಪೋರ್ಟ್ ಮಾಡುವವರಿಗಾಗಲಿ ಆ ಸೌಜನ್ಯತೆ ಬರಲಿಲ್ಲ. ಇವೊತ್ತು ಮೊಸಳೇ ಕಣ್ಣೀರು ಸುರಿಸುವುದಕ್ಕೆ ಇವರು ರೈತರ ಪರವಾಗಿ ಮಾತನಾಡತಕ್ಕಂಥದ್ದು ಬಹಳ ಶೋಚನೀಯವಾದ ವಿಚಾರ. ಆದ್ದರಿಂದ ಈ ಸಂದರ್ಭದಲ್ಲಿ ಸಭಾನಾಯಕರು ಇದಕ್ಕೆ ಚರ್ಚೆ ಮಾಡಲು ಅವಕಾಶ ಕೊಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಈ ಚರ್ಚೆ ಬಹಳ ಅತ್ಯಗತ್ಯ. ನಾವು ರೈತರ ಪರವಾಗಿ ಇರತಕ್ಕಂಥ ಜನ ಎನ್ನತಕ್ಕಂಥ ವಿಚಾರ ಹೇಳಿದ್ದಾರೆ. ಆದ್ದರಿಂದ ಈ ಸಮಯವನ್ನು ಕಾಲಹರಣ ಮಾಡದೆ ದಯವಿಟ್ಟು ಮಾನ್ಯ ಯಡಿಯೂರಪ್ಪನವರು ಬಹಳ ದಿವಸಗಳಿಂದ ಅನುಭವ ಪಡೆದಿರತಕ್ಕಂಥವರು ಅವರು ಹಿಂತಿರುಗಿ ಈ ಸದನದ ಆಸನದಲ್ಲಿ ಕುಳಿತುಕೊಳ್ಳುತ್ತಾರೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್). ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾದ ಮೇಲೆ ಉತ್ತರಕೊಡತಕ್ಕ ಸಂದರ್ಭದಲ್ಲಿ ರೈತರ ಸಾಲದ ಬಗ್ಗೆ ಹೇಳುತ್ತೇನೆಂದು ಹೇಳಿದ್ದಾರೆ. ಇದು ಎಲ್ಲದಕ್ಕಿಂತ ಮಹತ್ತರವಾದ ವಿಚಾರ. ಈ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ಪ್ರಸ್ತಾಪ ಮಾಡಬೇಕಾಗಿತ್ತು. ಏಕೆಂದರೆ ಇದನ್ನು ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿದ್ದಾರೆ ಈ ಭರವಸೆಯನ್ನು ಈಡೇರಿಸುತ್ತಾರೋ ಅಥವಾ ಇಲ್ಲವೋ ಎಂಬಂದನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸೇರಿಸಬೇಕಾಗಿತು. ನಾನು ಮೊದಲಿನಿಂದ ಕೊನೆಯವರೆಗೆ ೨-೩ ಸಾರಿ ರಾಜ್ಯಪಾಲರ ಭಾಷಣವನ್ನು ತಿರುವಿ ಹಾಕಿದ್ದೇನೆ. ಒಂದು ಕಡೆಯೂ ಇದರ ಪ್ರಸ್ತಾಪವಿಲ್ಲ. ಇಂಥ ಮಹತ್ತರ ವಿಚಾರವನ್ನು ಪ್ರಸ್ತಾಪ ಮಾಡದೆ ಇರುವುದರಿಂದ ಇದರ ಬಗ್ಗೆ ಸರ್ಕಾರದವರು ಒಂದು ಆಶ್ವಾಸನೆಯನ್ನು ಕೊಡಬೇಕು. ಮಾನ್ಯ ಯಡಿಯೂರಪ್ಪದವರು ಹೇಳಿದ ಹಾಗೆ ಮಾಡುತೇವೆಂದು ಅಥವಾ ಇಲ್ಲವೆಂದು ಹೇಳಿ. ಕೇವಲ ಚುನಾವಣಾ ಪ್ರಚಾರಕೋಸ್ಕರ ಅಚ್ಚು ಹಾಕಿದ್ದೇವೆಂದಾದರೂ ಹೇಳಿ. ಇದು ಮಹತ್ತರ ವಿಚಾರ. ಇಡೀ ರಾಜ್ಯದ ರೈತರಿಗೆ ಅನ್ವಯವಾಗತಕ್ಕ ವಿಚಾರ.

(ಯಡಿಯೂರಪ್ಪನವರು ವೆಲ್‌ನಲ್ಲಿ ನಿಂತು ಮಾತನಾಡಿದರು)

ಈಗಾಗಲೇ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರತಕ್ಕ ಕೆಲವು ರಾಜ್ಯಗಳಲ್ಲಿ ರೈತರ ಸಾಲವನ್ನು ವಜಾ ಮಾಡುತ್ತೇವೆ ಎಂದು. ಘೋಷಣೆ ಮಾಡಿದ್ದಾರೆ. ಏಕೆಂದರೆ ಅಲ್ಲಿ ಚುನಾವಣೆ ಬರುತ್ತದೆ. ಚುನಾವಣೆ ಸಂದರ್ಭದಲ್ಲಿ ಜನತೆಗೆ ಏನಾದರೂ ಹೇಳಬೇಕು ಎಂದು ಇಲ್ಲಿಯೂ ಕೂಡ ಚುನಾವಣೆಗೆ ಪೂರ್ವದಲ್ಲಿ ಅವರ ಪ್ರಣಾಳಿಕೆಯಲ್ಲಿ ಸೇರಿಸಿದ್ದಾರೆ. ಅಲ್ಲಿ ಹೇಳಿರತಕ್ಕ ಮಾತನ್ನು, ಅಲ್ಲಿ ಮಾಡಿರತಕ್ಕ

ಕೆಲಸವನ್ನು ಇಲ್ಲಿ ಹೇಳಿದ್ದಾರೆ. ಅಲ್ಲಿ ಮಾಡಿರುವುದಕ್ಕೆ ಇಲ್ಲಿ ಮಾಡದೆ ಇರುವುದಕ್ಕೆ ಕಾರಣವೇನು ? ಇದು ರಾಜ್ಯದ ರೈತನನ್ನು ಪೀಡಿಸತಕ್ಕ ಪ್ರಶ್ನೆಯಾಗಿದೆ. ಸರ್ಕಾರದ ವತಿಯಿಂದ ಮಾಡುತ್ತೇವೆ ಅಥವಾ ಇಲ್ಲವೆಂದು ಹೇಳಲಿ. ಇನ್ನು ನಾನು ಪ್ರಸ್ತಾಪ ಮಾಡಿರತಕ್ಕ ವಿಚಾರವೆಂದರೆ ವಿದ್ಯುತ್ತಿನ ವಿಚಾರ. ಅದರ ಬಗ್ಗೆ ಸರ್ಕಾರದವರು ಇದುವರೆಗೆ ಏನೂ ಹೇಳಲಿಲ್ಲ. ಅದಕ್ಕೆ ಪರಿಹಾರ ಕೂಡ ಸೂಚಿಸಿದ್ದೇನೆ. ಈ ಸದನದ ಒಂದು ಸಮಿತಿಯನ್ನು ಮಾಡಲಿ, ಅದು ವರದಿ ಕೊಟ್ಟು ಇರತಕ್ಕ ವಿಚಾರವನ್ನು ಸರ್ಕಾರಕ್ಕೆ ತಿಳಿಸಲಿ ಎಂದು ಸಲಹೆ ಮಾಡಿದ್ದೇನೆ, ಅದರ ಬಗ್ಗೆ ಮೊಂಡಾಟವಾಡುತ್ತಿದ್ದರೆ ರೈತರ ಗತಿ ಏನಾಗಬೇಕು ?

ಅಧ್ಯಕ್ಷರು.—ಅದು ತೀರ್ಮಾನವಾಗಿದೆ.

ಶ್ರೀ ಸಿ. ಬೈರೇಗೌಡ.—ಅದು ತೀರ್ಮಾನವಾಗಲಿಲ್ಲ. ಅದರ ಬಗ್ಗೆ ಏನಾಯಿತು. ಸದನದ ಸಮಿತಿ ಮಾಡುವುದಕ್ಕೆ ಸರ್ಕಾರದ ಒಪ್ಪಿಗೆ ಇದೆಯೋ ಅಥವಾ ಇಲ್ಲವೆ ? ಅದನ್ನಾದರೂ ಹೇಳಲಿ. ಇದನ್ನು ನಾನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಸರ್ಕಾರಕ್ಕೆ ಸಹಕಾರ ಕೊಡುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು.—ಈಗ ಪಾಟೀಲರು ಮಾತನಾಡುವುದು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಅದಕ್ಕೆ ತಾವು ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಯಡಿಯೂರಪ್ಪನವರು ಎತ್ತಿರತಕ್ಕ ಪ್ರಶ್ನೆ ಬಹಳ ಮಹತ್ವದ್ದಿದೆ. ಇಲ್ಲಿ ರೈತರ ಪ್ರತಿನಿಧಿಗಳು ಬಂದಿದ್ದಾರೆ. ಜನಸಂಘದವರು, ಬಿ.ಜೆ.ಪಿ.ಯವರು ಬಂದಿದ್ದಾರೆ. ಅವರ ವಿಷಯಕ್ಕೆ ಮನ್ನಣೆ ಎಷ್ಟು ಕೊಡಬೇಕು ಎಂಬ ಅರಿವು ನಮಗಿದೆ. ಕಾಂಗ್ರೆಸ್‌ನಲ್ಲೂ ಕೂಡ ಹಲವಾರು ಸದಸ್ಯರು ರೈತರ ಮಕ್ಕಳಾಗಿ ಆರಿಸಿ ಬಂದಿದ್ದಾರೆ. ಇವೊತ್ತು ರೈತರ ಹಿತಕ್ಕೆ ವಿರೋಧವಾಗಿ ಮಾತನಾಡುವುದಾದರೆ ರೈತರಿಗೆ ದ್ರೋಹ ಮಾಡಿದಂತಾಗುತ್ತದೆ ಎಂಬ ಅರಿವು ಕಾಂಗ್ರೆಸ್‌ನವರಿಗೆ ಇದೆ. ಇವತ್ತು ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೂ ಮಾನ್ಯ ಸದಸ್ಯರು ಒಳಗೆ ಬಂದು (ವೆಲ್‌ನಲ್ಲಿ) ಮಾತನಾಡಿದರೆ ಅದು ಶಿಸ್ತಿನ ಭಂಗವಾಗುತ್ತದೆ. ಇದರಿಂದ ರೈತರ ಹಿತಕ್ಕೆ ಧಕ್ಕೆಯಾಗುವಂಥ ರೀತಿಯಲ್ಲಿ ಸರ್ಕಾರದಿಂದ ಉತ್ತರ ಬರಬಹುದು.

(ಮಾನ್ಯ ಯಡಿಯೂರಪ್ಪನವರು ವೆಲ್‌ನಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು. ಅಧ್ಯಕ್ಷರ ಆದೇಶದಂತೆ ಅದನ್ನು ದಾಖಲಿಸಲಿಲ್ಲ.)

ಶ್ರೀ ಕೆ.ಹೆಚ್. ಪಾಟೀಲ್.—ರೈತರ ಹಿತಕ್ಕೆ ವಿರೋಧವಾಗಿ ಮಾಡಿದರೆ ಉಳಿಯುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಅದು ಬಿ.ಜೆ.ಪಿ.ಯವರಿಗೆ ಗೊತ್ತಾಗಿದೆ. ನೀವು ಎಲ್ಲಾ ಕಡೆ ಉಮೇದುವಾರರನ್ನು ನಿಲ್ಲಿಸಿದ್ದಿರಿ. ನೀವು ರೈತರಿಗೆ ವಿರೋಧ ಮಾಡುತ್ತೀರಿ ಎಂದು ನಿಮಗೆ ಜನ ಓಟ್ ಹಾಕಲಿಲ್ಲ. ಈ ವಿಚಾರದಲ್ಲಿ ಸದನದ ಅಭಿಪ್ರಾಯ ಪಡೆಯೋಣ. ಎಲ್ಲರೂ ಕೂಡಿ ತೀರ್ಮಾನ ಮಾಡೋಣ. ನೀವು (ಬಿ.ಜೆ.ಪಿ. ಸದಸ್ಯರಿಗೆ) ನಿಮ್ಮ ಸ್ಥಾನಕ್ಕೆ ಹೋಗಿರಿ. ನಾವು ನೀವು ಕೂಡಿ ಮಾತನಾಡಿ ನಿಮ್ಮನ್ನೂ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಸರ್ಕಾರದವರು ಎಷ್ಟರ ಮಟ್ಟಿಗೆ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಅದನ್ನು ಮಾಡುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಬಂದು ಇದರ ಬಗ್ಗೆ ಹೇಳಲಿ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಮತ್ತು ಇನ್ನುಳಿದಿರತಕ್ಕ ಸದಸ್ಯಮಿತ್ರರು ಎತ್ತಿರತಕ್ಕ ವಿಷಯ, ಅದರ ಪ್ರಾಮುಖ್ಯತೆ ದೃಷ್ಟಿಯಿಂದ ಕಡಿಮೆ ಏನಲ್ಲ ಎಂಬುದು ಎಲ್ಲರೂ ಒಪ್ಪಿರತಕ್ಕದ್ದು. ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಜರೂರಾತಿ ದೃಷ್ಟಿಯಿಂದಲೂ ಅತಿ ಅಗತ್ಯವಾಗಿ ಜರೂರಾಗಿ ಗಮನಿಸಬೇಕಾದ ವಿಷಯ ಹೌದು ಎಂಬುದು ನಾವೆಲ್ಲಾ ಮನಗಂಡಿದ್ದೇವೆ. ಏತಕ್ಕೆಂದರೆ ಎಷ್ಟೋ ಸಾರಿ ಆ ಕಡೆ ಕುಳಿತಿದ್ದಾಗಲೂ ಪ್ರಸ್ತಾಪ ಮಾಡಿರತಕ್ಕದ್ದು ನಮ್ಮ ಗಮನದಲ್ಲಿದೆ. ಇವತ್ತು ಮಾನ್ಯ ಯಡಿಯೂರಪ್ಪನವರು ಎರಡು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ರೈತರ ಸಾಲ ಎಂದರೆ ಸಹಕಾರ ಸಂಘಗಳ ಸಾಲ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ಗಳ ಸಾಲವು ಕೂಡ ಅದರಲ್ಲಿ ಬರುತ್ತದೆಂದು ಭಾವಿಸಿದ್ದೇನೆ. ಆ ಮೇಲೆ ರೈತ ಸಂಘದ ಪ್ರತಿನಿಧಿಗಳಾದ ಬಾಬೂಗೌಡ ಪಾಟೀಲರು ವಾಣಿಜ್ಯ ಬ್ಯಾಂಕುಗಳಿಂದ ತೆಗೆದುಕೊಂಡಿರತಕ್ಕ ಸಾಲವನ್ನು ಕೂಡ ರದ್ದು ಮಾಡಬೇಕು ಎಂದು ಹೇಳಿದ್ದಾರೆ. ಆ ವಿಚಾರ ಕೂಡ ಪ್ರಸ್ತಾಪ ಆಗಿದೆ. ಚುನಾವಣಾ ಕಾಲದಲ್ಲಿ ಆ ರೀತಿ ನಿಲುವನ್ನು ತೆಗೆದುಕೊಂಡಿದ್ದಾರೆ ಎಂಬುದು ನಮ್ಮ ಗಮನದಲ್ಲಿದೆ. ಯಾವುದೇ ಪಕ್ಷದ ಸರ್ಕಾರ ಇದ್ದರೂ ಕೂಡ ನಾವು ಕೆಲವು ವಿಚಾರಗಳನ್ನು

ತೀರ್ಮಾನ ಮಾಡಬೇಕಾದರೆ ಯೋಚನೆ ಮಾಡಬೇಕಾಗುತ್ತದೆ. ಒಬ್ಬ ರೈತನಿಗೆ ಸಹಕಾರ ಸಂಘದಿಂದ ಅಥವಾ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಕೊಟ್ಟ ಮೇಲೆ ಅದನ್ನು ಅವನು ಹಿಂದಕ್ಕೆ ಕೊಡಬಾರದು ಎನ್ನುವ ರೀತಿಯಲ್ಲಿ ಯಾರೂ ವಿಚಾರ ಮಾಡುವುದಿಲ್ಲ. ಬಡ್ಡಿ ಜೊತೆ ಮರುಪಾವತಿ ಮಾಡಬೇಕಾಗುತ್ತದೆ. ನಮಗೆ ರಿಸರ್ವ್ ಬ್ಯಾಂಕ್‌ನಿಂದ ಮತ್ತು ನಬಾರ್ಡ್ ಮುಖಾಂತರ ಹಣ ಬರುವುದರಿಂದ ಅದು ಕಾನೂನಿಗೆ ಅನುಗುಣವಾಗಿರುವುದರಿಂದ ತಕ್ಷಣ ಸಾಲ ರದ್ದು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದೇನೂ ಹೊಸದಲ್ಲ. ಅನೇಕ ವರ್ಷಗಳಿಂದ ನಮ್ಮನ್ನು ನಿಮ್ಮನ್ನು ಕಾಡತಕ್ಕ ವಿಚಾರ ಇದು. ಮಾನ್ಯ ಯಡಿಯೂರಪ್ಪನವರು ಮತ್ತು ಬಾಬೂಗೌಡ ಪಾಟೀಲ್ ಅವರು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ ಅದರಲ್ಲಿ ನಾವೂ ಭಾಗಿಯಾಗಿ ಹೇಳುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದರು, ಹಿಮಾಚಲ ಪ್ರದೇಶದ ಸರ್ಕಾರ ಮತ್ತು ಮಧ್ಯ ಪ್ರದೇಶದ ಸರ್ಕಾರ ಇತ್ತೀಚೆಗೆ ಒಂದು ತೀರ್ಮಾನ ಮಾಡಿದ್ದಾರೆ ಎಂದು ಹೇಳಿದರು. ಈ ಸಾಲದಲ್ಲಿ ವಾಣಿಜ್ಯ ಬ್ಯಾಂಕುಗಳ ಸಾಲವೂ ಸೇರಿದೆ ಯೆಂದು ಪತ್ರಿಕೆಯಲ್ಲಿ ನಾವು ಓದಿಲ್ಲ. ಸಹಕಾರಿ ಸಂಘಗಳಿಗೆ ಸಂಬಂಧಪಟ್ಟ ಸಾಲಗಳು ಎನ್ನುವುದು ಮಾತ್ರ ಗೊತ್ತಿದೆ. ಇವತ್ತು ಕೇಂದ್ರದಲ್ಲಿ ಏನು ರಾಷ್ಟ್ರೀಯ ರಂಗದ ಸರ್ಕಾರ ಅಸ್ತಿತ್ವದಲ್ಲಿ ಇದೆ, ಆ ಸರ್ಕಾರದವರೂ ಕೂಡಾ 10 ಸಾವಿರ ರೂಪಾಯಿಗಳವರೆಗೆ ಮಿತಿಯನ್ನು ಹಾಕಿ ಅದಕ್ಕೆ ಒಳಗಿರತಕ್ಕ ಸಾಲವನ್ನು ಕೂಡಾ ಮನ್ನಾ ಮಾಡತಕ್ಕ ವಿಚಾರವನ್ನು ಇಟ್ಟಿರುವುದರ ಜೊತೆಗೆ ಕೆಲವೊಂದು ಕಟ್ಟುಪಾಡುಗಳನ್ನು ಸಹಾ ಸೂಚಿಸಿದ್ದಾರೆ. ಅದೇನೆಂದರೆ ಯಾರು ಯಾರು ಪದೇ ಪದೇ ಸಾಲವನ್ನು ತೆಗೆದುಕೊಂಡು ಅದನ್ನು ಕಟ್ಟಿಲ್ಲ ಅಂತಹವರಿಗೆ ಇದು ಅನ್ವಯವಾಗುವುದಿಲ್ಲವೆಂದೂ ಸಹಾ ಹೇಳಿದ್ದಾರೆ. ಹಿಂದೆ ಮಹಾರಾಷ್ಟ್ರದಲ್ಲಿ ಅಂತುಲೆ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಇದ್ದಾಗ ಕೂಡ ಈ ಸಾಲವನ್ನು ರದ್ದು ಮಾಡತಕ್ಕ ತೀರ್ಮಾನವನ್ನು ಮಾಡಿತ್ತು. ಆಗ ಅದಕ್ಕೆ ರಿಸರ್ವ್ ಬ್ಯಾಂಕ್‌ನವರು ಒಪ್ಪುವುದಿಲ್ಲ ಎಂದು ಹೇಳಿದರು. ಹರಿಯಾಣಾದಲ್ಲಿ ದೇವೀಲಾಲ್‌ರವರು ನಾವು ಈ ಸಾಲವನ್ನು ರದ್ದುಮಾಡುತ್ತೇವೆಂದು ಅವರು ಮಾಡಿರತಕ್ಕ ಪ್ರಕಟಣೆಯನ್ನು...

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ. ನನ್ನದೊಂದು ಕ್ರಿಯಾಲೋಪ ಇದೆ. ಈಗ ಹೌಸ್ ಆರ್ಡರ್‌ನಲ್ಲಿ ಇಲ್ಲ. ಈಗ ಮಾನ್ಯ ಬಂಗಾರಪ್ಪನವರು ಚರ್ಚೆ ಮಾಡುತ್ತಿದ್ದಾರೆ. ಮಾನ್ಯ ಬಂಗಾರಪ್ಪನವರ ಚರ್ಚೆ ಫಲಪ್ರದವಾಗಬೇಕಾದರೆ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ಹೋದರೆ ಈ ಸಭೆಗೆ ಗೌರವ ಕೊಟ್ಟಹಾಗೆ ಆಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—(ವೆಲ್‌ನಿಂದ) ಚರ್ಚೆಗೆ ಅವಕಾಶ ಕೊಡುತ್ತೇವೆಂದು ಹೇಳಲಿ, ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ,—ಮಾನ್ಯ ಬಂಗಾರಪ್ಪನವರು ಚರ್ಚೆ ಪ್ರಾರಂಭಿಸಿದ್ದಾರೆಂದು ಮಾನ್ಯ ಮಂಜುನಾಥ್ ಅವರು ಸ್ಪಷ್ಟೀಕರಿಸಿದ್ದಾರೆ. ಮಾನ್ಯ ಅಧ್ಯಕ್ಷರು ಚರ್ಚೆ ಮಾಡಿ ಎಂದು ಹೇಳಿ ಅವಕಾಶ ವನ್ನು ಕೊಟ್ಟರೆ ನಾವು ಕುಳಿತುಕೊಳ್ಳುತ್ತೇವೆ,

ಶ್ರೀ ಟಿ.ಎಂ. ಮಂಜುನಾಥ್.—ಸಭೆ ಕ್ರಮವಾಗಿ ಇಲ್ಲದೇ ಇದ್ದಾಗ ಸಲಹೆ ಕೊಡತಕ್ಕದ್ದು ಉಚಿತವಲ್ಲ. ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ಹೋಗಲಿ. ಇಲ್ಲಿ ಯಾರೊಬ್ಬರ ಅಭಿಪ್ರಾಯವನ್ನೂ ಮೊಟಕು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹರಿಯಾಣಾದ ದೇವೀಲಾಲರ ಸರ್ಕಾರದಲ್ಲಿ ಬಿಜೆಪಿಯವರೂ ಸಹ ಭಾಗಿಯಾಗಿದ್ದರು. ಈಗ ಇಲ್ಲದೇ ಇರಬಹುದು. ಇವರು ಇರಲಿ ಅಥವಾ ಇಲ್ಲದೇ ಇರಲಿ ಅವರು ಅಲ್ಲಿ ತೀರ್ಮಾನ ಮಾಡಿದರು. ರಿಸರ್ವ್ ಬ್ಯಾಂಕ್‌ನವರು ಒಪ್ಪಿಲ್ಲ ಎಂದು ಹೇಳಿದರು. ವಿ.ಪಿ. ಸಿಂಗ್ ಅವರ ನೇತೃತ್ವದ ಸರ್ಕಾರ ಏನು ಇದೆ ಅದು ಕೂಡಾ ತೀರ್ಮಾನ ಮಾಡಬೇಕೆಂದರೆ ರಿಸರ್ವ್ ಬ್ಯಾಂಕ್‌ನ ನಿಯಮಾವಳಿ, ಕಾನೂನುಗಳನ್ನು ಗಮನದಲ್ಲಿ ಇಟ್ಟುಕೊಂಡು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಇಡೀ ರಾಷ್ಟ್ರಕ್ಕೆ ಅನ್ವಯವಾಗುತ್ತದೆ. ಈಗ ನಾನು ಮಾಡುತ್ತಿರುವುದು ಚರ್ಚೆ ಅಲ್ಲ. ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟರೆ ಚರ್ಚೆ ಮಾಡಬೇಕಾಗುತ್ತದೆ, ಇಲ್ಲಿ ಚರ್ಚೆಗೆ ಅನುಮತಿ ಕೋರಿ ಪೂರ್ವಾನುಮತಿ ಬಗ್ಗೆ ಏನು ಪ್ರಸ್ತಾಪವನ್ನು ಸದಸ್ಯರು ಮಾಡುತ್ತಿದ್ದಾರೆ ಆ ಬಗ್ಗೆ ಹೇಳಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ. ಹೆಚ್. ಪಾಟೀಲ್‌ರವರು ಬಂಗಾರಪ್ಪನವರು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ನಮಗೂ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ, ಕೇಂದ್ರ ಸರ್ಕಾರ, ಹರಿಯಾಣ ಸರ್ಕಾರ ಈ ತರಹ ಡೀಟೆಲ್ಸ್‌ಗೆ ಹೋದಾಗ ಅವರು ಈ ಬಗ್ಗೆ ಚರ್ಚೆ ಮಾಡಿದಾಗ ನಾವೂ ಮಾತನಾಡಬೇಕಾಗುತ್ತದೆ. ಅದರ ಕ್ಲಾರಿಫಿಕೇಶನ್ ಕೊಡ ಬೇಕಾಗುತ್ತದೆ. ಆದ್ದರಿಂದ ಅದು ಬೇಡ. ನಾನು ಒಂದು ಸಲಹೆ ಕೊಡುತ್ತೇನೆ,

ಅಧ್ಯಕ್ಷರು.—ತಾವು ಸಲಹೆ ಕೊಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಯಡಿಯೂರಪ್ಪನವರು ಹಾಗೂ ಅವರ ಜೊತೆಯಲ್ಲಿರ ತಕ್ಕವರು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ ನಾವು ಒಂದು ವಾಪಸ್ಸು ನಮ್ಮ ಪೀಠಗಳಲ್ಲಿ ಕುಳಿತು ಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ದಯವಿಟ್ಟು ತಾವು ಯಾವುದಾದರೂ ಫಾರಂನಲ್ಲಿ ಇದಕ್ಕೆ ಚರ್ಚೆಗೆ ಅವಕಾಶ ಕೊಡಿ ಅದಕ್ಕೆ ಅವರು ಒಪ್ಪಿಕೊಳ್ಳುತ್ತಾರೆ.

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.—ಅವರ ಜೊತೆಯಲ್ಲಿ ನೀವೂ ಸೇರಿಕೊಂಡು, ರೈತರನ್ನು ಹಾಳು ಮಾಡಿದ್ದಾರೆ. ರೈತ ಸಂಘವನ್ನು ಒಡೆದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಇದೆಲ್ಲಾ ರಾಷ್ಟ್ರಮಟ್ಟದಲ್ಲಿ ತೀರ್ಮಾನ ವಾಗತಕ್ಕ ವಿಚಾರ ಎನ್ನತಕ್ಕದ್ದು ಸರಿಯಿದೆ, ತೀರ್ಮಾನವಾಗುತ್ತದೆಂದು ಎಲ್ಲರಿಗೂ ಗೊತ್ತಿದೆ. ಕೇಂದ್ರ ಸರ್ಕಾರದವರು ಒಂದು ವೇಳೆ ೧೦ ಸಾವಿರ ರೂಪಾಯಿಗಳ ಒಳಗೆ ಇರತಕ್ಕ ಸಾಲವನ್ನು, ಅಸಲು ಮತ್ತು ಬಡ್ಡಿಯನ್ನು ರದ್ದು ಮಾಡುತ್ತೇವೆ ಅಥವಾ ವಜಾ ಮಾಡುತ್ತೇವೆ ಎನ್ನತಕ್ಕ ತೀರ್ಮಾನವನ್ನು ಮಾಡಿ ದರೆ ಅದು ಇಡೀ ರಾಷ್ಟ್ರಕ್ಕೆ ಅನ್ವಯವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ಕುಳಿತುಕೊಳ್ಳಿ. ಈ ಸಭೆಯ ಕಾರ್ಯಕಲಾಪ ಗಳನ್ನು ಈ ರೀತಿ ನಡೆಸುವುದಕ್ಕೆ ಆಗುವುದಿಲ್ಲ, ಚರ್ಚೆಗೆ ಒಂದು ಗೌರವ ಇರಬೇಕು. ಚರ್ಚೆಗೆ ಒಂದು ಗಾಂಭೀರ್ಯತೆ ಇರಬೇಕು, ಮತ್ತು ಅದಕ್ಕೆ ಒಂದು ಚೌಕಟ್ಟು ಇರಬೇಕು. ಸದನದ ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಿ ಈ ಸಭೆಯ ವೆಲ್‌ನೊಳಗೆ ಬಂದು ಇಲ್ಲಿ ನಿಂತುಕೊಂಡು ಚರ್ಚೆ ಮಾಡುತ್ತಿರುವುದು ಸರಿಯಲ್ಲ. ಮತ್ತೊಮ್ಮೆ ಅತಿ ವಿನಯದಿಂದ ಪ್ರಾರ್ಥನೆ ಮಾಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನ ತಮ್ಮ ಕೆಲಸ ಮುಗಿಸಿಕೊಂಡು ಸಭೆಗೆ ಬಂದಿದ್ದಾರೆ. ತಮ್ಮ ಸ್ಥಾನಗಳಲ್ಲಿ ಕುಳಿತು ಸಭೆಯ ಗೌರವವನ್ನು ಕಾಪಾಡಿ. ಇದು ನನ್ನ ಕಳಕಳಿಯ ಮನವಿ. ತಾವು ಇದಕ್ಕೆ ಓಗೊಡಬೇಕು, ಧ್ವನಿಗೂಡಿಸಬೇಕು, ಮುಖ್ಯ ಮಂತ್ರಿಗಳು ಸಭೆಗೆ ಬಂದಿದ್ದಾರೆ ತಾವು ತಮ್ಮ ಪೀಠಗಳಲ್ಲಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ. ನಾನು ಹೇಳುತ್ತಾ ಇದ್ದೆ, ಕೇಂದ್ರದಲ್ಲಿ ಏನು ಸರ್ಕಾರ ರಚನೆಯಾಗಿದೆ ಆ ಸರ್ಕಾರಕ್ಕೆ ಭಾರತೀಯ ಜನತಾ ಪಕ್ಷ ಬೆಂಬಲ ಕೊಟ್ಟಿದೆ. ೧೦ ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡತಕ್ಕ ವಿಚಾರವನ್ನು ಕೇಂದ್ರ ಸರ್ಕಾರ ಪ್ರಕಟ ಮಾಡಿದ ಮೇಲೆ ಆ ತೀರ್ಪನ್ನು ನಾವು ಕಾಯುವುದು ಬಹಳ ಒಳ್ಳೆಯದು ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾವು ಕರ್ನಾಟಕ ರಾಜ್ಯದ ಜನತೆಗೆ ಏನೂ ಮಾತನ್ನು ಕೊಟ್ಟಿದ್ದೇವೆ, ಅದನ್ನು ಮುಚ್ಚಿಡತಕ್ಕದ್ದಲ್ಲ. ನಾವು ರೈತರಿಗೆ ಏನೊಂದು ವಿಚಾರವನ್ನು ಹೇಳಿದ್ದೇವೆ, ಆ ಬಗ್ಗೆ ಸರ್ಕಾರ ವಿಚಾರ ಮಾಡಿ ಒಂದು ತೀರ್ಮಾನವನ್ನು ಮಾಡಬೇಕು. ಇದನ್ನು ವಿಚಾರ ಮಾಡುವುದಕ್ಕಾದರೂ ಕೂಡ ಕಾಲ ಮತ್ತು ಆ ರೀತಿಯ ಸರ್ಕಾರ ಬೇಕು ಎಂಬ ಮೂಲ ನೀತಿಯನ್ನು ತಾವು ಅರ್ಥಮಾಡಿಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ಮಾನ್ಯ ಅಧ್ಯಕ್ಷರು ಈಗಾಗಲೇ ವಿನಂತಿ ಮಾಡಿದ್ದಾರೆ. ನಾವು ಎಲ್ಲರೂ ಕೂಡ ವಿನಂತಿ ಮಾಡುತ್ತೇವೆ. ಬೇರೆ ಕಾರ್ಯಕ್ರಮ ಹಾಕಬೇಕು ಎಂಬ ಅಭಿಪ್ರಾಯ ಇದ್ದರೆ ಅದು ತಮಗೆ ಬಿಟ್ಟಿರತಕ್ಕ ವಿಚಾರ. ಆದರೆ ಈ ಸಂದರ್ಭದಲ್ಲಿ ಅದು ಸಾಧುವೇ ಎಂಬುದನ್ನು ದಯವಿಟ್ಟು ವಿಚಾರ ಮಾಡಿ. ನಾನು ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ. ೨೨ನೇ ತಾರೀಕಿನ ದಿವಸ ಉತ್ತರ ಕೊಡತಕ್ಕಂಥ ಸಂದರ್ಭ ಕೂಡ ಬರುತ್ತದೆ. ಅಷ್ಟರೊಳಗೆ ನಾನು ಏನು ಹೇಳುವುದಕ್ಕೆ ಸಾಧ್ಯವಾಗುತ್ತದೆಯೋ ಅದನ್ನು ಹೇಳುತ್ತೇನೆ ಎಂದು ಹೇಳಿದ್ದಾರೆ. ಸರ್ಕಾರ ಮೊನ್ನೆ ಮೊನ್ನೆ ರಚನೆಯಾಗಿರುವಾಗ ಎಲ್ಲವನ್ನೂ ಒಟ್ಟಿಗೆ ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ ಮುಂದೆ ಸಂದರ್ಭಗಳು ಬೇಕಾದಷ್ಟು ಇರುತ್ತವೆ. ಎಲ್ಲವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಎಡಪಂಥೀಯ ಸರ್ಕಾರ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಇದ್ದಾಗ ಎಲ್ಲವನ್ನೂ ಮಾಡಿಲ್ಲವೆಂಬುದನ್ನು ದಯವಿಟ್ಟು ಮರೆಯಬೇಡಿ. ಅವರಿಗೂ ಸಹ ಆರ್ಥಿಕ ಅಭಾವದಿಂದಾಗಿ ಮಾಡಲಿಕ್ಕೆ ಆಗಲಿಲ್ಲ. ಇದಕ್ಕೆ ರಿಸರ್ವ್‌ಬ್ಯಾಂಕ್ ಗೈಡ್‌ಲೈನ್ಸ್ ಇರುತ್ತದೆ. ಇದರ ಬಗ್ಗೆ ನಾನು ವಿವರಕ್ಕೆ ಹೋಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ಪಶ್ಚಿಮ ಬಂಗಾಳದ್ದು ಬೇಡ. ನಿಮ್ಮ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ನಾನು ಹೇಳುತ್ತೇನೆ. ಶ್ರೀ ಯಡಿಯೂರಪ್ಪನವರೇ ದಯವಿಟ್ಟು ತಮ್ಮ ಆಸನಕ್ಕೆ ಹೋಗಿ ಕುಳಿತುಕೊಳ್ಳಿ.

ಅಧ್ಯಕ್ಷರು.—ಈಗ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಏನು ಪ್ರಶ್ನೆಯನ್ನು ಸದಸ್ಯರು ಎತ್ತಿದ್ದಾರೆ ಅದರ ಬಗ್ಗೆ ನನ್ನ ನಿಲುವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಇವೊತ್ತಿನಿಂದ ವಂದನಾರ್ಪಣೆ ಸೂಚನೆ ಮೇಲೆ ಚರ್ಚೆ ಪ್ರಾರಂಭ ಆಗುತ್ತದೆ. ಮೂರು ದಿವಸ ಚರ್ಚೆಯಾಗುತ್ತದೆ. ೨೨ನೇ ತಾರೀಖು ನಾನು ಚರ್ಚೆಯಲ್ಲಿ ಬರುವಂಥ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಿ ಸರ್ಕಾರದ ನಿಲುವು, ಧೋರಣೆ ಏನಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ ಎನ್ನುವ ಮಾತನ್ನು ಈಗಾಗಲೇ ಸ್ಪಷ್ಟೀಕರಿಸಿದ್ದೇವೆ. ಆದರೆ ಮಾನ್ಯ ಸದಸ್ಯರು ನಿಲುವಳಿ ಸೂಚನೆಯಾಗಿ ಇದನ್ನು ಇವತ್ತೆ ತೆಗೆದುಕೊಳ್ಳಿ. ನಾಳೆ ತೆಗೆದುಕೊಳ್ಳಿ, ನಾಡಿದ್ದು ತೆಗೆದುಕೊಳ್ಳಿ ಎಂದು ಈ ರೀತಿಯಲ್ಲಿ ಸಮಯ ನಿಗದಿ ಮಾಡಿ ಸರ್ಕಾರದಿಂದ ಉತ್ತರವನ್ನು ಎಕ್ಸ್‌ಟ್ರಾಕ್ಟ್ ಮಾಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ ಅದನ್ನು ನಾನು ಅಪ್ರಿಸಿಯೇಟ್ ಮಾಡುವುದಿಲ್ಲ. ಅದಕ್ಕಾಗಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಈಗ ಆರು ಜನ ಸದಸ್ಯರು ವೆಲ್ ಒಳಗಡೆ ನಿಂತಿದ್ದಾರೆ. ಈ ಸಭೆಯ ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಿ ಅವರು ಅಲ್ಲಿ ನಿಂತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ೨೨೨ ಜನರಲ್ಲಿ ಅನೇಕ ಜನ ಸದಸ್ಯರು ಆ ಕಡೆ ಕುಳಿತಿದ್ದಾರೆ. ಇದೊಂದು ಗಹನವಾದ ಸಮಸ್ಯೆ ಇದೆ. ಸರ್ಕಾರಕ್ಕೆ ಕೇಳಿದ ತಕ್ಷಣ ಬಟನ್ ಒತ್ತಿ ಕಂಪ್ಯೂಟರ್‌ನಲ್ಲಿ ತಯಾರು ಮಾಡಿ ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಅನೇಕ ಮಾನ್ಯ ಸದಸ್ಯರು ಅಪ್ರಿಸಿಯೇಟ್ ಮಾಡುತ್ತಾರೆ ಎಂದು ನಾನು ಭಾವಿಸುತ್ತೇನೆ. ಈ ವೆಲ್‌ನಲ್ಲಿ ನಿಂತಿರುವ ಸದಸ್ಯರು ಮಾತ್ರ ಇದನ್ನು ಮಾಡುತ್ತಿಲ್ಲ. ಅಷ್ಟೇ ವ್ಯತ್ಯಾಸ ನಾನು ಅದಕ್ಕಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಒಂದು ಸಮಸ್ಯೆ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡುವುದಕ್ಕೆ ಸರ್ಕಾರ ಪ್ರಾರಂಭ ಮಾಡಿದೆ, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಫೈನಾನ್ಸಿಯಲ್ ಇಂಪ್ಲಿಕೇಶನ್ ಏನಿದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ ಮತ್ತು ಹತ್ತು ಸಾವಿರಕ್ಕಿಂತ ಒಳಗಡೆ ಇರುವಂತಹ ರೈತರ ಸಾಲಗಳು ಜಿಲ್ಲಾವಾರು ಎಷ್ಟು ಇದೆ ಎಂಬ ಮಾಹಿತಿಯನ್ನು ಸಂಗ್ರಹ ಮಾಡಬೇಕಾಗುತ್ತದೆ.

೧-೦೦ ಪಿ. ಎಂ.

ಇದನ್ನೆಲ್ಲಾ ಕಲೆಕ್ಟ್ ಮಾಡಿದಮೇಲೆ, ಏನಾಗುತ್ತದೆ, ಏನಿಲ್ಲ ಎಂಬುದನ್ನು ನೋಡಬೇಕಾಗುತ್ತದೆ. ಈ ಮಧ್ಯೆ ಕೇಂದ್ರ ಸರ್ಕಾರದ ಧೋರಣೆ ಏನಿದೆ ಎಂಬುದು ನಮಗೆ ಇನ್ನೂ ಸ್ಪಷ್ಟವಾಗಿ ಬಂದಿಲ್ಲ. ಅವರೂ ಕೂಡ ವಿಚಾರ ಮಾಡುತ್ತಿದ್ದಾರೆ, ಮೊನ್ನೆ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ನೀವು ಇವತ್ತೇ ಹೇಳಿ, ನಾಳೆ, ೨೪ ಗಂಟೆಯೊಳಗೆ ಈ ಬಗ್ಗೆ ಹೇಳಿ, ೪೮ ಗಂಟೆಯೊಳಗೇ ಹೇಳಿ ಎಂಬ ನಿಲುವು ಒತ್ತಾಯ ಹೇರುವುದಲ್ಲ. ಈ ವಿಚಾರದಲ್ಲಿ ಟೈಮ್ ಬಾಂಡ್ ಅಷೂರೆನ್ಸ್ ಕೊಡುವುದು ಕಷ್ಟವಾಗುತ್ತದೆ. ೨೨ನೇ ತಾರೀಖು ನಾನು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ಕೊಡುತ್ತೇನೆ, ಅದರಲ್ಲಿ ಎಲ್ಲಾ ವಿಚಾರಗಳನ್ನೂ ಸ್ಪಷ್ಟಮಾಡುತ್ತೇನೆ. ಅಲ್ಲಿಯವರೆಗೂ ತಾಳ್ಮೆಯಿಂದ ಇದ್ದು, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

† ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಅನೇಕ ವಿಚಾರಗಳನ್ನು ನಮ್ಮ ಗೆಳೆಯರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅವರ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ನಾವಾವರೂ ಹೇಳುವುದು ಇಷ್ಟೆ. ಈ ಸಾಲವನ್ನು ಕೊಡುವುದಾಗಲೀ, ಸಾಲವನ್ನು ವಜಾ ಮಾಡುವುದಾಗಲೀ, ಪೂರ್ಣವಾಗಿ ಸರಿಯೆಂದು ನಾನು ಹೇಳುವುದಿಲ್ಲ. ಆದರೆ ಸರ್ಕಾರ ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಪ್ರಸಂಗ ಬಂದಿದೆ, ಮಾನ್ಯ ಬಂಗಾರಪ್ಪನವರು ಹಾಗೂ ಅವರ ಮಿತ್ರರು ಮಾತನಾಡುತ್ತಾ, ಹರಿಯಾಣದಲ್ಲಿ ತೆಗದುಕೊಂಡಿರತಕ್ಕ ಕಾರ್ಯಕ್ರಮ ಮತ್ತು ರಾಷ್ಟ್ರೀಯ ರಂಗದ ಸರ್ಕಾರ ತೆಗೆದುಕೊಂಡಿರತಕ್ಕ ನಿರ್ಣಯದ ಬಗ್ಗೆ ಪ್ರಸ್ತಾಪ ಮಾಡಿದರು. ಇದು ಅಷ್ಟು ಸರಿಯಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ನೀವು ಈಗಾಗಲೇ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಯಾವ ಯಾವ ಸಾಲವನ್ನು ಮನ್ನಾ ಮಾಡಬೇಕು, ಇದರ ಸಾಧಕ ಬಾಧಕಗಳೇನು ಎನ್ನುವುದನ್ನು ಆಲೋಚನೆ ಮಾಡಬೇಕು. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದು ಇಷ್ಟೆ. ನಮ್ಮ ಸ್ನೇಹಿತರು ನಿಲುವಳಿ ಸೂಚನೆ ಮುಖಾಂತರ ಈ

ವಿಚಾರವನ್ನು ಪ್ರಶ್ನೆ ಮಾಡಬೇಕೆಂದು ಹೇಳಿದ್ದಾರೆ. ಆದರೆ ಈ ವಿಷಯ ಯಾವುದೇ ನಿಯಮದ ಮುಖಾಂತರ ಚರ್ಚೆಯಾಗಲಿ, ಎಲ್ಲಾ ವಿಚಾರಗಳನ್ನೂ ವಿವರವಾಗಿ ಹೇಳುವುದಕ್ಕೆ ಅವಕಾಶ ಸಿಗುತ್ತದೆ. ಆದರೆ, ಮಧ್ಯಪ್ರದೇಶ, ಕೇರಳ, ವೆಸ್ಟ್ ಬಂಗಾಳ ಮುಂತಾದ ಬೇರೆ ಸರ್ಕಾರಗಳ ನೀತಿ ಬಗ್ಗೆ ಹೇಳುವುದು ಸರಿಯಲ್ಲ. ಹಣಕಾಸಿನ ಪರಿಸ್ಥಿತಿ ತಿಳಿದುಕೊಂಡು ಯಾವ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ನಿಲುವಳಿ ಸೂಚನೆ ಮುಖಾಂತರ ಇದನ್ನು ಚರ್ಚೆ ಮಾಡಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ ಮಾತು ಸರಳವಾಗಿದೆ, ಮತ್ತು ಸ್ಪಷ್ಟವಾಗಿದೆ. ಜೊತೆಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡತಕ್ಕಂಥ ಕಾಲದಲ್ಲಿ, ಈ ಸದನದ ಸದಸ್ಯರೆಲ್ಲರೂ ಏನು ಅಭಿಪ್ರಾಯ ಪಡುತ್ತಾರೆ ಎಂಬುದನ್ನು ನೋಡಬೇಕಾಗುತ್ತದೆ. ಜೊತೆಗೆ ಸದನದ ಎಲ್ಲಾ ಸದಸ್ಯರೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಇದೆ, ಏಕೆಂದರೆ ರೈತರ ಹಿತಚಿಂತನೆ ಮಾಡತಕ್ಕ ಆಸಕ್ತಿ ನಮಗೂ ಇದೆ, ಈ ಸನ್ನಿವೇಶವನ್ನು ಉಪಯೋಗಿಸಿಕೊಂಡು, ಸದನದ ಎಲ್ಲಾ ಸದಸ್ಯರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ಅವಕಾಶ ಇದೆ, ಈ ಒಂದು ಅವಕಾಶವನ್ನು ಉಪಯೋಗಿಸಿಕೊಳ್ಳೋಣ. ಸನ್ನಿವೇಶ ಹೇಗೆ ಬರುತ್ತದೆ ಎಂಬುದನ್ನು ನೋಡಿಕೊಂಡು ಒಂದು ತೀರ್ಮಾನಕ್ಕೆ ಬರೋಣ. ಒಂದೇಸಾರಿ ಕುತ್ತಿಗೆ ಹಿಸುಕುವಂತೆ ಮಾಡುವುದು ಸರಿಯಲ್ಲ. ನೀವೇನು ರೈತರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದೀರಿ, ಅದಕ್ಕಿಂತ ಒಂದು ಪಟ್ಟು ಜಾಸ್ತಿ ಕಳಕಳಿ ನಮಗೂ ಇದೆ. ನೀವು ಇದರಲ್ಲಿ ಅನುಮಾನ ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಅದಕ್ಕೆ ಅವಕಾಶ ಕೊಡಿ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ, ಇವೆಲ್ಲವನ್ನೂ ಹೇಳಬೇಕೆಂಬ ಅಭಿಲಾಷೆಯನ್ನು ಇಟ್ಟುಕೊಂಡಿದ್ದಾರೆ. ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಲಿ. ಮಾನ್ಯ ಏಕಾಂತಯ್ಯನವರೂ ಕೂಡ ಬೇರೆ ಸ್ವರೂಪದಲ್ಲಿಯೂ ಇದನ್ನು ತಂದು ಚರ್ಚೆ ಮಾಡುವುದಕ್ಕೆ ಸಂಪೂರ್ಣ ಅವಕಾಶ ಇದೆ ಎಂದು ಹೇಳಿದ್ದಾರೆ. ಆದ್ದರಿಂದ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಈಗಾಗಲೇ ನಮ್ಮ ಮುಂದೆ ಇರುವುದರಿಂದ, ಅದರಲ್ಲಿ ಈ ವಿಷಯವನ್ನು ಎಷ್ಟು ಬೇಕಾದರೂ ಹಿಗ್ಗಿಸಿ ತಮ್ಮ ಅಭಿಪ್ರಾಯವನ್ನು ಕೊಡಬಹುದು. ಇಷ್ಟೆಲ್ಲಾ ಅವಕಾಶಗಳು ಮಾನ್ಯ ಸದಸ್ಯರಿಗೆ ಇರಬೇಕಾದರೆ, ಇವುಗಳನ್ನು ಉಪಯೋಗಿಸಿಕೊಳ್ಳಬೇಕು. ಮಾನ್ಯ ಬಾಬಾಗೌಡ ಪಾಟೀಲರು ರೈತರ ಪ್ರತಿನಿಧಿಯಾಗಿ ಬಂದಿದ್ದಾರೆ, ಅವರು ಹೇಳುವುದನ್ನು ಕೇಳಿ. ನೀವು ಹೇಳುವುದನ್ನೂ ಕೇಳಿ, ಎಲ್ಲರೂ ಒಂದು ತೀರ್ಮಾನಕ್ಕೆ ಬರೋಣ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿರುವುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ|| ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಸಭೆ ಪ್ರಾರಂಭವಾದಾಗ ಅಧ್ಯಕ್ಷರು ಬಂದು ಅವರ ಪೀಠದಲ್ಲಿ ಕೊಡುವುದಕ್ಕಿಂತ ಮುಂಚೆಯೇ ಈ ನಿಲುವಳಿ ಸೂಚನೆಯನ್ನು ಪ್ರಾರಂಭಮಾಡಿ ಆಯಿತು. ಪ್ರಾರಂಭ ಮಾಡಿದಮೇಲೆ ಎಲ್ಲಾ ನೀತಿ ನಿಯಮಗಳನ್ನೂ ಬಲಿಗೊಟ್ಟು, ಈ ಸಭೆಯನ್ನು ನಿಲ್ಲಿಸುವುದಕ್ಕೆ ಕಾರ್ಯಕಲಾಪಗಳಿಗೆ ಅಡ್ಡಿಮಾಡುವುದಕ್ಕೆ ಕೆಲವರು ಸತತ ಪ್ರಯತ್ನ ನಡೆಸುತ್ತಿದ್ದಾರೆ. ನಿನ್ನೆಯಿಂದ ಇದು ಪ್ರಾರಂಭವಾಗಿದೆ. ಇದು ನಾಚಿಕೆಗೇಡು.

(ಗೊಂದಲ)

ಡಾ|| ಎನ್. ಬಿ. ನಂಜಪ್ಪ.—ಎಲ್ಲರೂ ಗಲಾಟೆ ಮಾಡುವಂತಹ ಸಂದರ್ಭದಲ್ಲಿ ನಾನಾದರೂ ಹೇಳುವುದು ಇಷ್ಟೇ. ನಮಗೆ ಹೇಗೆ ಮಾತನಾಡುವುದಕ್ಕೆ ಹಕ್ಕು ಇದೆಯೋ ಅವರಿಗೂ ಹಾಗೆಯೇ ಇದೆ, ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಶಾಂತವಾಗಿ ಕುಳಿತುಕೊಂಡಿದ್ದೇವೆ. ನಿನ್ನೆ ಬೆಳಿಗ್ಗೆಯಿಂದಲೂ ನಾವು ಸುಮ್ಮನೆ ಕುಳಿತುಕೊಂಡಿದ್ದೇವೆ. ಇಂತಹ ಸಂದರ್ಭದಲ್ಲಿ ಅವರು ಕೂಗಾಟ ಪ್ರಾರಂಭ ಮಾಡಿದರು. ಅವರು ಕೂಗಾಟ ಪ್ರಾರಂಭ ಮಾಡಿದರೆ ನಾವೂ ಕೂಗಾಟ ಪ್ರಾರಂಭ ಮಾಡಬೇಕಾಗುತ್ತದೆ. ಆದರೆ ನಾನು ಹೇಳುವುದು ಇಷ್ಟೇ, ಈ ಸದನದಲ್ಲಿ ಕಾರ್ಯಕಲಾಪಗಳು ನಡೆಯುತಕ್ಕಂಥ ಸಂದರ್ಭದಲ್ಲಿ ಎಲ್ಲರೂ ಕೂಡ ಈ ಸದನದ ಡಿಗ್ನಿಟಿಯನ್ನು ಕೀಪ್ ಅಪ್ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ನಿನ್ನೆ ಬೆಳಗ್ಗೆಯಿಂದ, ಓಥ್ ಟೇಕಿಂಗ್ ಸೆರಮನಿಯಿಂದ ಹಿಡಿದು ಇವತ್ತಿನವರೆಗೂ ನಾನು ನೋಡಿದ್ದೇನು ಎಂದರೆ, ಆ ಕಡೆಯ ಒಬ್ಬೊಬ್ಬರೂ, ಅಧ್ಯಕ್ಷರಿಗೂ ಕೂಡ ಅವರು ಕೊಡತಕ್ಕಂಥ ಆದೇಶವನ್ನೂ ಕೂಡಾ ಲೆಕ್ಕಿಸದೆ, ಮಧ್ಯೆ ಮಧ್ಯೆ ಮಾತನಾಡಿ, ಗೊಂದಲಮಯ ವಾತಾವರಣವನ್ನು ಸೃಷ್ಟಿ ಮಾಡಿ, ಕೆಲವು ಜನಗಳು ಈ

ಸದನವನ್ನು ರ್ಯಾನ್‌ಸ್ಯಾಕ್ ಮಾಡಿ, ಇಕ್ಕಟ್ಟಿಗೆ ಸಿಕ್ಕಿಸತಕ್ಕಂಥ ಪರಿಸ್ಥಿತಿಯನ್ನು ಉಂಟು ಮಾಡುತ್ತಿರುವುದನ್ನು ನಾವು ನೋಡಂತ್ತಿದ್ದೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಾಲಿಗೆ ತಪ್ಪಿ ಮಾತನಾಡುತ್ತಿದ್ದಾರೆ. ಇದು ಅವಿವೇಕದ ಪರಮಾವಧಿ, ಸಂಸದೀಯ ಪದ್ಧತಿ ಅವರಿಗೆ ಗೊತ್ತೇ ಇಲ್ಲ.

(ಗೊಂದಲ)

ಡಾ॥ ಎನ್. ಬಿ. ನಂಜಪ್ಪ.—ಇದಕ್ಕೆ ತಾವು ಅವಕಾಶ ಕೊಡಬಾರದು ಎಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋಪಾಲಮುಕುಂದ ಕಾನಡೆ.—ಇವರು ಇದೆಲ್ಲಾ ಮಾಡುವುದು ನೋಡಿದರೆ ಇವರೊಬ್ಬರಿಗೇ ರೈತರ ಬಗ್ಗೆ ಕಳಕಳಿ ಇದೆ, ಬೇರೆ ಯಾರೂ ರೈತರ ಕಡೆ ಇಲ್ಲ ಎಂದು ಗೊತ್ತಾಗುತ್ತದೆ. ಹಿಂದೆ ನಾವು ಏನು ೬೬ ಮಂದಿ ಆ ಕಡೆ ಇದ್ದೆವು, ಆಗ ನಾವು ರೈತರ ಬಗ್ಗೆ ಹೇಳಿದಾಗ ನಿಮ್ಮ ಸರಕಾರ ಕೇಳಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಆ ಪ್ರಶ್ನೆ ಬಂದಿಲ್ಲ. ಆಗ ನಾವು ರೈತರ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾವು ರೈತರ ಬಗ್ಗೆ ಹೋರಾಟ ಮಾಡಿದಾಗ ನಮ್ಮನ್ನು ಹೊರಗೆ ಹಾಕಿದ ಜನ ಇವರು. ಇವರಿಗಿಂತ ಹೆಚ್ಚಿನ ಕಳಕಳಿ ನಮಗೆ ರೈತರ ಬಗೆಗೆ ಇದೆ. ನಮ್ಮನ್ನು ಎತ್ತಿ ಹೊರಗೆ ಹಾಕಿದ ಜನ ಇವತ್ತು ಅಲ್ಲಿದ್ದಾರೆ. ನಮ್ಮ ಸರಕಾರ ಇವೊತ್ತು ಬಂದಿದೆ. ನಮ್ಮ ಸರಕಾರದ ಮೇಲೆ ಗೂಬೆಕೂರಿಸುವುದಕ್ಕೆ ಈ ನಾಟಕ ಮಾಡುತ್ತಿದ್ದಾರೆ. ರೈತರ ಬಗ್ಗೆ ಕಳಕಳಿ ನಮಗೂ ಇದೆ. ರೈತರ ಸಾಲ ಮನ್ನಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಇವತ್ತು ಹುಟ್ಟಿದ ಮಗು ಇವತ್ತೇ ನಡೆಯಬೇಕೆಂಬುದಕ್ಕೆ ಆಗುವುದಿಲ್ಲ. ನಿನ್ನೆ ತಾನೆ ಸರಕಾರ ರಚನೆ ಮಾಡಿದ್ದೇವೆ. ಇವತ್ತು ಇಲ್ಲಿ ಬಂದಿದ್ದೇವೆ, ನಮಗೆ ಟೈಮ್ ಬೇಕು. ಆದುದರಿಂದ ಮಾನ್ಯ ಸದಸ್ಯರು ವಾಪಸ್ ಹೋಗಿ ತಮ್ಮ ಸ್ಥಾನದಲ್ಲಿ ಕೊಡಬೇಕೆಂದು ಹೇಳುತ್ತೇನೆ. ರೈತರ ಸಮಸ್ಯೆಗಳನ್ನು ನಮ್ಮ ಸರಕಾರ ಬಗೆಹರಿಸುತ್ತದೆ. ನಾವು ನಿಮ್ಮ ಹಾಗೆ ಹೇಳಿ ಓಡಿಹೋಗುವುದಿಲ್ಲ. ಅದನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಧ್ಯಕ್ಷರಲ್ಲಿ ಒಂದು ವಿನಂತಿ, ಅಧ್ಯಕ್ಷರೇ ಇವರೆಲ್ಲರಿಗೂ ಮಾತನಾಡುವುದಕ್ಕೆ ತಾವು ಟೈಮ್ ಕೊಟ್ಟಿದ್ದೀರಿ. ನಾವು ಒಂದು ನಿಮಿಷ ಮಾತನಾಡಿದ ತಕ್ಷಣ ನಮ್ಮನ್ನು ಎತ್ತಿ ಹೊರಗೆ ಹಾಕಿದರು. ತಕ್ಷಣ ಹಾಕಿದರು ಆದರೆ ತಾವು ಇವರಿಗೆ ಟೈಮ್ ಕೊಟ್ಟಿದ್ದೀರಿ ಸದಸ್ಯರು. ಅವರವರ ಜಾಗದಲ್ಲಿ ಹೋಗಿ ಕುಳಿತುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮುಂದಿನ ಕಾರ್ಯಕಲಾಪಗಳಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ.ಎಂ. ಮಂಜುನಾಥ್ (ತಿಪಟೂರು)—ಮಾನ್ಯ ಅಧ್ಯಕ್ಷರೇ ಸದನದ ಕಾರ್ಯಕಲಾಪಗಳು ನಡೆಯಬೇಕಾಗಿದೆ, ತಾವು ಅವರಿಗೆ ಈಗಾಗಲೇ ಒಂದು ಸಮ್ಮತಿಯನ್ನು ಕೊಟ್ಟಿದ್ದೀರಿ, ಸೂಚನೆಯನ್ನು ಸಹ ಕೊಟ್ಟಿದ್ದೀರಿ ಅದೇನೆಂದರೆ ತಾವು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಎಂದು. ಅವರು ನನಗಿಂತಲೂ ಹಿರಿಯ ಸದಸ್ಯರು ಇದ್ದಾರೆ. ನಾನು ಹೆಚ್ಚು ಕಾಲ ಮಾತನಾಡಿ ಸಭೆಯ ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಸಭೆಯಲ್ಲಿ ನಡೆಯತಕ್ಕಂಥ ಎಲ್ಲಾ ಕಾರ್ಯಕಲಾಪಗಳಿಗೂ ಗೌರವ ಕೊಡತಕ್ಕಂಥಾದ್ದು ಎಲ್ಲರ ಕರ್ತವ್ಯ. ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ಸನ್ಮಾನ್ಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು ಬಹಳ ಆವೇಶಭರಿತವಾಗಿ ಅನೇಕ ಮಾತುಗಳನ್ನು ಆಡುತ್ತಿದ್ದಾರೆ. ಅವರು ಮಾತನಾಡುವುದು ಬೇಡವೆಂದು ನಾನು ಹೇಳುವ ಶಕ್ತಿ ನನಗೆ ಇಲ್ಲ. ಯಾವ ಯಾವ ಚಳವಳಿ ಎಲ್ಲಿ ಹೇಗೆ ಮಾಡಬೇಕು ಎನ್ನುವುದು ನನಗಿಂತ ಅವರಿಗೆ ಚೆನ್ನಾಗಿ ಗೊತ್ತಿದೆ ಅವರು ಕಾಂತಿಕಾರಕ ಚಳುವಳಿಯನ್ನು ಮಾಡಿದ್ದಾರೆ. ಅದನ್ನು ಹೊರಗಡೆ ಮಾಡಿದರೆ ಒಳ್ಳೆಯದು ಇಲ್ಲದಿದ್ದರೆ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಇನ್ನು ತಾವು ನಿನ್ನೆಯ ದಿವಸ ಒಂದು ಮಾತು ಹೇಳಿದಿರಿ. ಅದೇ ರೀತಿ ಸಭಾನಾಯಕರು ಸಹ ಒಂದು ಮಾತು ಹೇಳಿದರು ಅದೇನೆಂದರೆ ಈ ಮನೆಯ ಗೌರವವನ್ನು ಕಾಪಾಡಿಕೊಂಡು ಬರತಕ್ಕಂಥಾದ್ದು...

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಸಾಲ ಮನ್ನಾ ಮಾಡದಿದ್ದ ಮೇಲೆ...

(ಗೊಂದಲ)

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಪದೇ ಪದೇ ಎದ್ದು ನಿಂತು ರೈತರ ಸಾಲ ಮನ್ನಾ ಮಾಡಿ ಎಂದು ಹೇಳಿದರೆ ಸಮಸ್ಯೆ ಪರಿಹಾರವಾಗುತ್ತದೆಯೇ? ಮಾನ್ಯ ಯಡಿಯೂರಪ್ಪನವರು ಒಂದು ಪಕ್ಷದ ನಾಯಕರು ಸಹ ಆಗಿದ್ದಾರೆ ಅವರನ್ನು ನಾನು ಒಂದು ಪ್ರಶ್ನೆ ಕೇಳುತ್ತೇನೆ ರಾಷ್ಟ್ರದಲ್ಲಿ ಅನೇಕ ರಾಜ್ಯ ಸರ್ಕಾರಗಳು ಸರ್ಕಾರವನ್ನು ನಡೆಸಿಕೊಂಡು ಬರುತ್ತಿವೆ. ಅವರಲ್ಲಿ ಯಾರೇ ಆಗಲಿ ತಕ್ಷಣವೇ ಸಮಸ್ಯೆ ಪರಿಹಾರ ಮಾಡಿಬಿಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಆದರೂ ನಮ್ಮ ಸಭಾನಾಯಕರು ಈಗಾಗಲೇ ಹೇಳಿದ್ದಾರೆ ಯಾವುದೇ ಸರ್ಕಾರವಾಗಲಿ, ಯಾವುದೇ ಒಂದು ತೀರ್ಮಾನವನ್ನು ಆಗಲಿ ಎದ್ದು ನಿಂತು ಈ ರೀತಿ ತೀರ್ಮಾನ ಮಾಡಿದ್ದೇವೆಂದು ಹೇಳಿರತಕ್ಕಂಥ ಸಂತಿ ಸಂಪ್ರದಾಯ ಈ ಒಂದು ಭಾರತ ದೇಶದಲ್ಲಿ ಎಲ್ಲೂ ನಡೆದು ಕೊಂಡು ಬಂದಿಲ್ಲ, ಆದ್ದರಿಂದ ದಯಮಾಡಿ ಈ ಸದನ ಕೆಲಸ ಮಾಡತಕ್ಕಂಥ ಅವಕಾಶವನ್ನು ಹಿರಿಯ ಸದಸ್ಯರು ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೇ ತಾವು ತಮ್ಮ ಹಠವನ್ನು ಬಿಟ್ಟು ಬಿಡಿ. ಹಠದಿಂದ ಏನನ್ನೂ ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ವಿಚಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಸೇರಿ ಬಗೆಹರಿಸತಕ್ಕಂಥಾದ್ದು ಎಂದು ನಮ್ಮ ಹಿರಿಯ ಸದಸ್ಯರು ಅನೇಕರು ಹೇಳಿದ್ದಾರೆ. ಇಂತಹ ಅನೇಕ ವಿಚಾರಗಳನ್ನು ಕುಳಿತುಕೊಂಡು ಚರ್ಚೆ ಮಾಡಿ ರೈತರಿಗೆ ಏನಾದರೂ ಸಹಾಯ ಮಾಡಬೇಕೆನ್ನುವ ದೃಷ್ಟಿಯನ್ನು ಆಳುವ ಪಕ್ಷದವರು ಮಾಡಬೇಕೇ ವಿನಃ ನೀವು ಈ ರೀತಿ ಧರಣಿ ಮಾಡಿದರೆ ಏನು ಪ್ರಯೋಜನ ? ಈ ಬಗ್ಗೆ ಹಿರಿಯ ಸದಸ್ಯರಾದ ಕೆ. ಎಚ್. ಪಾಟೀಲ್‌ರವರು ಮಾನ್ಯ ಬಂಗಾರಪ್ಪನವರೂ ಸಹ ಮಾತನಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಸಹ ಹಿರಿಯ ಸದಸ್ಯರಿದ್ದಾರೆ ಹಠ ಮಾಡಿ ಏನನ್ನು ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಎಲ್ಲರೂ ಒಮ್ಮತದಿಂದ ಕೂಡಿ ಸಮಸ್ಯೆಯನ್ನು ಪರಿಹಾರ ಮಾಡೋಣ. ಮಾನ್ಯ ಹಿರಿಯ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಂಡು ಬೇರೆರೂಪದಲ್ಲಿ ಬೇಕಾದರೆ ಚರ್ಚೆ ಮಾಡಲಿ. ಇಲ್ಲದಿದ್ದರೆ ಸಭೆ ನಡೆಯುವುದಕ್ಕೆ ಅನುವು ಆಗುವುದಕ್ಕೆ ಏನೂ ಕಾರ್ಯಕ್ರಮ ಬೇಕೋ ಆ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಿ. ಇಲ್ಲದಿದ್ದರೆ ಇದು ಅಗ್ಗದ ಪ್ರಚಾರಕ್ಕಾಗಿ ಮಾಡಿದಂತೆ ಆಗುತ್ತದೆ. ನಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು, ಕೆ. ಎಚ್. ಪಾಟೀಲ್‌ರವರು ಸಹ ಮಾತನಾಡಿ ಈ ಬಗ್ಗೆ ಕುಳಿತು ಚರ್ಚೆ ಮಾಡೋಣವೆಂದು ಹೇಳಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ಇಲ್ಲದಿದ್ದರೆ ಅಧ್ಯಕ್ಷರು ಯಾವ ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳಲಿ.

† ಶ್ರೀ ಬದ್ರಾಲಿ ಹಂಪನ ಗೌಡ.—(ಸಿಂಧನೂರು) ಮಾನ್ಯ ಅಧ್ಯಕ್ಷರೇ, ಈಗಲೇ ಈ ವಿಚಾರದ ಬಗ್ಗೆ ನಿರ್ಣಯ ಮಾಡಬೇಕೆಂದು ನಾವು ಕೇಳುತ್ತಿಲ್ಲ. ಅನಂತರ, ಸಮಯವನ್ನು ತೆಗೆದುಕೊಂಡು ನಿರ್ಣಯವನ್ನು ಕೊಡಲಿ. ಈಗ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ರೈತರ ಹಿತ ದೃಷ್ಟಿಯಿಂದ ಅನುಕೂಲವಾಗುತ್ತದೆ. ಇದು ಬಹಳ ಮಹತ್ವದ ವಿಷಯವಾಗಿದೆ, ಇದು ರೈತರ ಸಮಸ್ಯೆಯಾಗಿರುವುದರಿಂದ ತಾವು ಈ ಕೂಡಲೇ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ, ನಮ್ಮ ಸ್ನೇಹಿತರು ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳುತ್ತಾರೆ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ನನ್ನ ಸ್ನೇಹಿತರು ಒತ್ತಿ ಒತ್ತಿ ಒಂದು ಮಾತನ್ನು ಹೇಳಿದ್ದಾರೆ, ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ರೈತರುಗಳ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಿರಿ. ಅದರಂತೆ ಮಾಡಿ ಎಂದು, ನಮ್ಮ ಚುನಾವಣ ಪ್ರಣಾಳಿಕೆಯಲ್ಲಿ ನಮ್ಮ ಸರ್ಕಾರ ಬಂದ ತಕ್ಷಣವೇ ಎರಡು ಮೂರು ದಿನಗಳಲ್ಲಿ ಎಲ್ಲಾ ಕೆಲಸಗಳನ್ನು ಕಾರ್ಯಗತ ಮಾಡುತ್ತೇವೆಂದು ನಾವು ಹೇಳಿಲ್ಲ. ಚುನಾವಣ ಪ್ರಣಾಳಿಕೆಯಲ್ಲಿ ಹೇಳಿರುವುದು ನಮ್ಮ ಸರ್ಕಾರದ ಅವಧಿಯಲ್ಲಿ ಇದನ್ನು ಕಾರ್ಯಗತ ಮಾಡುತ್ತೇವೆಂದು. ತಕ್ಷಣ ಮರು ದಿವಸದಲ್ಲೇ ಮಾಡಿಬಿಡಬೇಕೆಂದಲ್ಲ. ಕೇಂದ್ರ ಸರ್ಕಾರದವರೂ ಅನೇಕ ವಿಷಯಗಳನ್ನು ಚುನಾವಣ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಅವುಗಳನ್ನು ಈ ಕ್ಷಣದಲ್ಲಿ ಮಾಡಬೇಕೆಂದು ನಿರ್ಣಯ ಮಾಡಿ ಎಂದು ಹೇಳಿದರೆ ಅದು ಸಾಧ್ಯವೇ? ಆದ್ದರಿಂದ, ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕು. ಚರ್ಚೆ ಮಾಡುವುದಕ್ಕೆ ಮಾತ್ರ ಅವಕಾಶ ಕೊಡಿ ಎಂದು ತಾವು ಕೇಳುವುದು ಸರಿಯಲ್ಲ. ಚರ್ಚೆಯಾದ ಮೇಲೆ ಅದಕ್ಕೆ ಸರ್ಕಾರ ಉತ್ತರ ಕೊಡಲೇ ಬೇಕಾಗುತ್ತದೆ. ವಂದನಾ ನಿರ್ಣಯದ ಬಗ್ಗೆ ಉತ್ತರ ಕೊಡುವಾಗ ಸ್ಪಷ್ಟಪಡಿಸುತ್ತೇನೆಂದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಅದಕ್ಕೆ ತಾವು ಸಂತುಷ್ಟರಾಗಬೇಕು. ತಾವು ಹಿರಿಯರಿದ್ದೀರಿ, ತಾವೇ ವಿಚಾರ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಈಗ ಸಭೆಯನ್ನು ಎರಡು ಮೂರು ನಿಮಿಷಗಳ ಕಾಲ ಮುಂದೂಡಿ ತೆರೆಯ ಮರೆಯೊಳಗೆ ಚರ್ಚೆ ಮಾಡಿದರೆ ಸಮಸ್ಯೆ ಬಗೆಹರಿಯುತ್ತದೆ.

ತಮ್ಮ ಕಾರ್ಯಾಲಯದಲ್ಲಿ ಕುಳಿತುಕೊಂಡು ಮಾತನಾಡಿದರೆ ಇದು ಬಗೆಹರಿಯುತ್ತದೆ. ತಾವು ಐದು ನಿಮಿಷಗಳ ಕಾಲ ಸದನವನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಮಾನ್ಯ ಸಭಾನಾಯಕರೂ ದಯವಿಟ್ಟು ಒಪ್ಪಬೇಕು.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಮಂಡಿಸಿದಂಥ ನಿಲುವಳಿ ಸೂಚನೆಯನ್ನು ಒಪ್ಪಬೇಕೋ ಬೇಡವೋ ಎಂಬ ವಿಚಾರ ತಮ್ಮ ಮುಂದೆ ಇದೆ. ಈಗಾಗಲೇ ನಮ್ಮ ಸಭಾ ನಾಯಕರು ಔದಾರ್ಯದಿಂದ ಈ ವಿಷಯವನ್ನು ಪರಿಶೀಲಿಸಲಿಕ್ಕೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಆದರೂ ಕೂಡ ತಮ್ಮ ಪೀಠಕ್ಕೆ ಅಗೌರದ ತರತಕ್ಕಂಥ ಕೆಲಸ ಕಾರ್ಯಗಳನ್ನು ನಮ್ಮ ಬಿ.ಜೆ.ಪಿ. ಪಕ್ಷದ ನಾಯಕರು ಮಾಡುತ್ತಿದ್ದಾರೆ. ತಾವು ಅದಕ್ಕೆ ಅವಕಾಶ ಕೊಡಲಿಕ್ಕೆ ಕೂಡದು. ಸದನದ ಪ್ರಾರಂಭವಾದ ನಂತರ ಈ ರೀತಿ ಚಟುವಟಿಕೆಗಳು ಕಾಣುತ್ತಿವೆ ಇದಕ್ಕೆ ತಾವು ಕಟ್ಟುನಿಟ್ಟಿನ ನಿಯಮ ತೆಗೆದುಕೊಂಡು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್, ಹೌಸ ಈಸ್ ನಾಟ್ ಇನ್ ಆರ್ಡರ್. ಅವರು ಸದನದ ಬಾವಿಯಲ್ಲಿ ಕುಳಿತುಕೊಂಡಿದ್ದಾರೆ, ನೀವು ಸಭೆ ನಡೆಸುತ್ತಿದ್ದೀರಿ.

ಶ್ರೀ ಕೆ. ಶಿವಮೂರ್ತಿ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಜನತೆಗೆ, ರೈತ ಬಾಂಧವರಿಗೆ ಈ ಸಭೆಯ ಮೂಲಕ ಮತ್ತು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಬಹುಮತವಾಗಿ ಪಡೆದಿರತಕ್ಕ ಪಕ್ಷ.

ಮಾನ್ಯ ಅಧ್ಯಕ್ಷರೇ, ಈ ನಮ್ಮ ಪಕ್ಷದ ಬಹುಮತವು ಕರ್ನಾಟಕದ ರೈತ ಬಾಂಧವರೆಲ್ಲರೂ ಮತ ಕೊಟ್ಟು ಬಂದ ಬಹುಮತವಾಗಿದೆ. ಇದು ಒಟ್ಟಾರೆ ಬಂದಿರತಕ್ಕಂಥ ಬಹುಮತ ಅಲ್ಲ. ರಾಜ್ಯದ ರೈತರು ಕಾಂಗ್ರೆಸ್ ಪಕ್ಷದ ತತ್ವಗಳನ್ನು ಒಪ್ಪಿಕೊಂಡು ತಮ್ಮ ಬಹುಮತವನ್ನು ಕೊಟ್ಟಿದ್ದಾರೆ. ಅವರು ಪಕ್ಷದ ಮೇಲಿಟ್ಟ ವಿಶ್ವಾಸವನ್ನು ನಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವ ಕಳಕಳಿಯು ನಮ್ಮದಾಗಿದೆ. ನಮ್ಮ ಸಭಾ ನಾಯಕರು ಈಗಾಗಲೇ ಹೇಳಿದ್ದಾರೆ. ಯಾವುದೇ ಸಮಸ್ಯೆಯನ್ನು ಬಗೆಹರಿಸಬೇಕಾದರೂ ಸಮಯ ಬೇಕಾಗುತ್ತದೆ. ಕೇವಲ ಕಾನೂನಿನ ಚೌಕಟ್ಟಿನಲ್ಲಿ ಸಾಗಿದರೂ ಆಗುವುದಿಲ್ಲ. ಸೂಕ್ತ ರೀತಿಯಲ್ಲಿ ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ. ಪರಿಹಾರವನ್ನು ಸೂಚಿಸುವುದನ್ನು ಬಿಟ್ಟು ನಾವೇ ರೈತರ ಪ್ರತಿನಿಧಿಗಳು, ನಾವೇ ರೈತರ ಬಗ್ಗೆ ಕಾಳಜಿಯುಳ್ಳವರು ಎಂದು ಮಾನ್ಯ ಸದಸ್ಯರುಗಳು ಹೇಳುಕೊಳ್ಳುವುದಾದರೆ ಅದನ್ನು ನಾವು ಒಪ್ಪುವುದಿಲ್ಲ. ನಿಮಗೆ ರೈತರ ಬಗ್ಗೆ ೧೦ರಷ್ಟು ಕಾಳಜಿ ಇದ್ದರೆ, ನಮಗೆ ೧೦೦ರಷ್ಟು ಇದೆ. ನಿಮಗೆ ೧೦೦ರಷ್ಟು ಕಾಳಜಿ ಇದ್ದರೆ, ನಮಗೆ ಅದಕ್ಕೂ ಹತ್ತುಪಟ್ಟು ಜಾಸ್ತಿ ಕಾಳಜಿ, ಕಳಕಳಿ ಇದೆ ನಾವು ಈ ಮಾತನ್ನು ರೈತರ ಮಕ್ಕಳಾಗಿ ಹೇಳುತ್ತಿದ್ದೇವೆ. ರೈತರ ಪ್ರತಿನಿಧಿಗಳಾಗಿ ಹೇಳುತ್ತಿದ್ದೇವೆ. ಆದುದರಿಂದ ತಮ್ಮ ಮೂಲಕ ನಾನು ವೆಲ್‌ನಲ್ಲಿ ಕುಳಿತಿರತಕ್ಕಂಥ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ರೀತಿಯಾಗಿ ಹಠ ಮಾಡಿಕೊಂಡು ಕುಳಿತರೆ ರೈತರ ಸಮಸ್ಯೆಗಳನ್ನಾಗಲೀ, ಇತರ ಯಾವುದೇ ಸಮಸ್ಯೆಗಳನ್ನಾಗಲೀ ಬಗೆಹರಿಸುವುದಕ್ಕೆ ಆಗುವುದಿಲ್ಲ. ಸೂಕ್ತ ರೀತಿಯಲ್ಲಿ ಕಾರ್ಯಕಲಾಪಗಳನ್ನು ಜರುಗಿಸಿ ಪರಿಹಾರವನ್ನು ಕಂಡುಕೊಳ್ಳಲು ಎಲ್ಲರೂ ಸಹಕರಿಸಿದರೆ ಅನುಕೂಲವಾಗುತ್ತದೆ ಎಂದು ವಿನಂತಿಸಿಕೊಳ್ಳುತ್ತಾ, ಈ ರೀತಿಯಲ್ಲಿ ಹಠ ಮಾಡಬಾರದು ಎಂದು ಹೇಳಿ, ಕಾಂಗ್ರೆಸ್ ಪಕ್ಷವು ರೈತರ ಪರವಾಗಿ ಇದೆ, ಅವರ ಪರವಾಗಿ ಹೋರಾಡುತ್ತದೆ ಎಂದು ಹೇಳ ಬಯಸುತ್ತೇನೆ.

ಅಧ್ಯಕ್ಷರು.—ಕಲಾಪಗಳು ಮುಂದುವರೆಯುವುದಕ್ಕೆ ಮುನ್ನ ಒಂದು ಮಾತು ಹೇಳಬಯಸುತ್ತೇನೆ ಮಾನ್ಯ ಸದಸ್ಯರಾದ ಬಸವರಾಜ್ ರಾಯರೆಡ್ಡಿಯವರು ನನ್ನ ಗಮನವನ್ನು ಸೆಳೆಯುತ್ತಾ, ಈ ಹೌಸ ಆರ್ಡರ್‌ನಲ್ಲಿ ಇಲ್ಲ ಎಂದು ಹೇಳಿದರು. ಆ ಬಗ್ಗೆ ಹೇಳುವುದೇನೆಂದರೆ, ೧೯೭೦ನೇ ಇಸವಿಯಲ್ಲಿ ಆಗ ಈ ಸಭೆಯ ಅಧ್ಯಕ್ಷರಾಗಿದ್ದವರು ಒಂದು ರೂಲಿಂಗ್‌ನ್ನು ಕೊಟ್ಟಿದ್ದಾರೆ. ಅದನ್ನು ನಾನು ಈಗ ತಮ್ಮ ಮುಂದೆ ಕೋಟ್ ಮಾಡಬಯಸುತ್ತೇನೆ. ಅದು ಹೀಗೆ ಇದೆ.

"Sitting of one member on the Floor of the House cannot make the proceedings in the House come to a stand

still. Therefore, inspite of the Ho'nble Members sitting, I think the proceedings can go on. No single Member or a couple of members can render the House incapable of carrying on its business. I therefore say that the sitting of one member or a couple of members on Dharana does not render the House ineffective."

I confined to that ruling. I fully Uphold this ruling.

ಶ್ರೀ ಡಿ. ಚಂದ್ರೇಗೌಡ.—ಸನ್ಮಾನ್ಯ ಸಭಾಧ್ಯಕ್ಷರೇ, ತಾವುಗಳು ನಿಯಮಾವಳಿಗಳ ವ್ಯಾಪ್ತಿಯಲ್ಲಿ ಕೊಟ್ಟಂಥ ತೀರ್ಮಾನವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಪರಿಸ್ಥಿತಿಯನ್ನು ಅರಿತು ಪರಿಹಾರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರೆ, ಸದನವು ಯೋಗ್ಯವಾಗಿ ನಡೆದುಕೊಂಡು ಹೋಗುವುದಕ್ಕೆ ಸಹಾಯಕವಾಗುತ್ತದೆ. ಆದುದರಿಂದ ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುವು ದೇನೆಂದರೆ, ಈ ಒಂದು ಗಂಭೀರ ಪರಿಸ್ಥಿತಿಯನ್ನು ತಾವುಗಳು ಗಮನಿಸಬೇಕು. ಮಾನ್ಯ ಸದಸ್ಯರುಗಳು ಯಾವುದೋ ಒಂದು ಕಾರಣಕ್ಕಾಗಿ ಅಲ್ಲಿ ಹೋಗಿ ಕುಳಿತಿಲ್ಲ. ರೈತರ ಒಟ್ಟಾರೆ ಹಿತ ದೃಷ್ಟಿಯಿಂದ ಅವರಿಗೆ ಅನುಕೂಲವಾಗಬೇಕೆಂಬ ಒಂದು ಸದಿಚ್ಛೆಯಿಂದ ಕಾರ್ಯವಾಗಬೇಕೆಂದು ಅಲ್ಲಿ ಕುಳಿತಿದ್ದಾರೆ. ತಾಂತ್ರಿಕ ಕಾರಣಗಳಿಗಾಗಿ ಗೌರವಾನ್ವಿತ ಸದಸ್ಯರನ್ನು ಅಲ್ಲಿ ಕುಳ್ಳಿರಿಸಿ ನಾವು ಕಲಾಪಗಳನ್ನು ಮಾಡಿದರೆ ಅದು ಸರಿಯಾಗಿ ಆಗುವುದಿಲ್ಲ. ತಾವುಗಳು ತಮ್ಮ ಕೊಠಡಿಯಲ್ಲಿ ಅವರನ್ನು ಕರೆದು ಕುಳಿತುಕೊಂಡು ಸೂಕ್ತ ಚರ್ಚೆ ಮಾಡಿ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರು......

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಅಧ್ಯಕ್ಷರು ಈ ರೀತಿಯಲ್ಲಿ ಅವರೊಡನೆ ಮಾತನಾಡುವುದಕ್ಕೆ ತಮ್ಮ ಕೊಠಡಿಯಲ್ಲಿ ಅವಕಾಶ ಮಾಡಿಕೊಟ್ಟರೆ, ತಾವು ಮಧ್ಯಪ್ರವೇಶ ಮಾಡಿ ಈ ವಾತಾವರಣವನ್ನು ತಿಳಿಗೊಳಿಸುವುದಕ್ಕೆ ಸಹಮತ ಹೊಂದುವುದಾದರೆ, ಅಲ್ಲಿ ಕುಳಿತ ಮಾನ್ಯ ಸದಸ್ಯರನ್ನು ನಾನು ಖಂಡಿತವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ವಿರೋಧ ಪಕ್ಷದ ನಾಯಕರು ಇರಲಿಲ್ಲ. ನಾನು ಕಳೆದ ಒಂದೂವರೆ ಗಂಟೆಯಿಂದ ಕಳಕಳಿಯಿಂದ ಸತತವಾದ ವಿಧವಿಧವಾದ ಪರಿಪರಿಯಲ್ಲಿ ಪ್ರಯತ್ನ ಮಾಡಿದ್ದೇನೆ. ನೀವು ನಿಮ್ಮ ಸ್ಥಾನಗಳಿಗೆ ಹೋಗಿ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಮಾಡಬೇಕಾಗಿದೆ. ನೀವು ನನ್ನ ಮಾತನ್ನು ಕೇಳಬೇಕಾಗುತ್ತದೆಂದು ನಾನು ಹೇಳಿದ್ದೆ. ಈಗ ಸರ್ಕಾರದವರು ೨೧ನೇ ತಾರೀಖು ಸಾಯಂಕಾಲ ೪ ಗಂಟೆಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡೋಣವೆಂದು ಹೇಳಿದ್ದಾರೆ. ಆನಂತರ ೨೨ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಆ ಚರ್ಚೆಗೆ ಉತ್ತರ ಕೊಡುವವರು ಇದ್ದಾರೆ. ಈ ಸೂಚನೆ ಸಮರ್ಥನೀಯವಾದ ಸೂಚನೆಯೆಂದು ನನಗನ್ನಿಸುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏನು ಅನ್ನಿಸುತ್ತದೆಯೋ ನನಗೆ ತಿಳಿಯದು. ೨೧ನೇ ತಾರೀಖು ಸಾಯಂಕಾಲ ಇದನ್ನು ವಿಶೇಷ ಚರ್ಚೆಗೆ ತೆಗೆದುಕೊಳ್ಳೋಣ. ೨೨ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಇದು ನಿಮ್ಮ ಕೇಳಿಕೆಗಳಿಗೆ ಸಮರ್ಥನೀಯ ಎಂದು ಅನ್ನಿಸುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.— ಒಂದು ತೀರ್ಮಾನವನ್ನು ತೆಗೆದುಕೊಳ್ಳಲು ಅವರು ಅವಕಾಶ ಕೊಡುತ್ತಿಲ್ಲ.

ಶ್ರೀ ಸಿ. ಬೈರೇಗೌಡ.—ನನ್ನ ಸಲಹೆ ವಿದ್ಯುತ್ತಿನ ಬಗ್ಗೆ. ನನ್ನ ನಿಲುವಳಿ ಸೂಚನೆಯನ್ನು ತಾವು ತಳ್ಳಿ ಹಾಕಿದ್ದೀರಿ ಎಂದು ಹೇಳಿಲ್ಲ. ಅಥವಾ ಒಪ್ಪಿಕೊಳ್ಳಲಾಗಿದೆ ಎಂದು ಸಹ ಹೇಳಿಲ್ಲ. ಅದರ ಬಗ್ಗೆ ತೀರ್ಪನ್ನು ಇನ್ನು ತಾವು ಇನ್ನೂ ನೀಡಿಲ್ಲ.

ಅಧ್ಯಕ್ಷರು.—ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ತೆಗದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ.—ಈ ರೈತರ ಸಾಲವನ್ನು ಮನ್ನಾ ಮಾಡುವುದರ ಬಗ್ಗೆ ವಿಶೇಷ ಚರ್ಚೆಗೆ ಅವಕಾಶವನ್ನು ನೀಡಿದ್ದೀರಿ. ಅದೇ ಪ್ರಕಾರವಾಗಿ ಇದನ್ನು ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಅದನ್ನು ಗಮನಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡೋಣ.

ಶ್ರೀ ಸಿ. ಬೈರೇಗೌಡ.—ಹಿಂದಿನ ವಿಧಾನ ಸಭೆಯು ವಿದ್ಯುತ್ತಿನ ಬಗ್ಗೆ ಒಂದು ಸದನದ ಸಮಿತಿಯನ್ನು ರಚನೆ ಮಾಡಿತ್ತು. ಆ ಸಮಿತಿಯು ವರದಿಯನ್ನು ಕೊಡುವುದಕ್ಕೆ ಮೊದಲೇ ವಿಧಾನ ಸಭೆಯು ವಿಸರ್ಜನೆಯಾಯಿತು. ಕೋಲಾರ ತುಮಕೂರು, ಬೆಂಗಳೂರು ಭಾಗದ ರೈತರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇದು ಅಲ್ಲಿರತಕ್ಕ ರೈತರ ಜೀವನ-ಮರಣ ಪ್ರಶ್ನೆಯಾಗಿದೆ. ಆ ವರದಿಯ ಮೇಲೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಸರ್ಕಾರದವರು ಸದನಕ್ಕೆ ತಿಳಿಸಬೇಕು. ಸದನದ ಸಮಿತಿಯು ಈ ವರದಿಯನ್ನು ಕೊಟ್ಟಿರುವುದರಿಂದ ಆ ಸಮಿತಿಯ ಸಲಹೆ ಸೂಚನೆಗಳನ್ನು ಪರಿಶೀಲನೆ ಮಾಡಿ, ಕ್ರಮ ಕೈಗೊಳ್ಳಬೇಕು. ನಾವು ಒಬ್ಬರೂ ಅಥವಾ ಇಬ್ಬರೂ ಇರಬಹುದು. ಸಂಖ್ಯೆ ಗಣನೆಗೆ ಬರುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ.—ಹಿಂದೆ ಇವರ ಸರ್ಕಾರವೇ ಇತ್ತು. ಆಗ ಏನು ಮಾಡಿದರು ? ಈಗ ಇವರಿಗೆ ಎಲ್ಲಿಲ್ಲದ ಉತ್ಸಾಹ ಬಂದಿದೆ.

ಶ್ರೀ ಸಿ. ಬೈರೇಗೌಡ.—ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡಿಲ್ಲ. ಸಮಸ್ಯೆಯನ್ನು ಪರಿಹರಿಸಲು ತಾವೆಲ್ಲರೂ ಸಹಕರಿಸಬೇಕು. ಕಳೆದ ವಿಧಾನ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾದನಂತರ ಒಂದು ಸದನದ ಸಮಿತಿಯನ್ನು ರಚನೆ ಮಾಡಿದರು. ಆ ಸಮಿತಿಯ ಸಲಹೆಗಳನ್ನು ಅನುಷ್ಠಾನ ಮಾಡುತ್ತೇವೆಂದು ಹೇಳಿದರೆ ಮುಗಿಯಿತು.

ಶ್ರೀ ಟಿ. ಎಂ. ಮಂಜುನಾಥ.—ಹಿಂದೆ ಇವರ ಸರ್ಕಾರ ಇದ್ದಾಗ ಏನೂ ಮಾಡಲಿಲ್ಲ. ಈಗ ನಾವು ಬಂದು ಇನ್ನೂ ಎರಡು ದಿವಸವಾಯಿತು ಎಲ್ಲಾ ಮಾಡಿ ಎಂದು ಹೇಳುತ್ತಿದ್ದಾರೆ. ಇವರು ಪಂಪ್‌ಸೆಟ್ಟುಗಳನ್ನು ಕಿತ್ತುಹಾಕಿಸಿದರು. ಈಗ ಮಾತ್ರ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.—ಈ ಸದನದ ವೇಳೆಯನ್ನು ವ್ಯಯಮಾಡುವುದು ನನಗೆ ಇಷ್ಟವಿಲ್ಲ.

೧-೩೦ ಪಿ. ಎಂ.

ಸದನದ ಸಮಯವನ್ನು ಉಳಿಸಬೇಕೆಂಬುದನ್ನು ಮನಸಿನಲ್ಲಿಟ್ಟುಕೊಂಡು ನಾನು ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಇದರ ಬಗ್ಗೆ ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಿ ಹೇಳಿಕೆ ಕೊಡಿಸುತ್ತೇನೆ.

ಶ್ರೀ ಸಿ. ಭೈರೇಗೌಡ.—ಹಾಗಾದರೆ ಸದನದ ಸಮಿತಿ......

ಅಧ್ಯಕ್ಷರು.—ಇಲ್ಲ ಹೇಳಿಕೆ ಕೊಡಿಸುತ್ತೇನೆ.

ಶ್ರೀ ಸಿ. ಭೈರೇಗೌಡ.—ಯಾವ ನಿಯಮಾವಳಿಗಳ ಪ್ರಕಾರ ಹೇಳಿಕೆ ಕೊಡಿಸುತ್ತೀರಿ ಸ್ವಾಮಿ ?

ಅಧ್ಯಕ್ಷರು.—ಅದನ್ನು ನಾನು ತಿಳಿಸುತ್ತೇನೆ ನಿಮಗೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಬಿಜೆಪಿಯ ವಿರೋಧ ಪಕ್ಷದ ಸದಸ್ಯರಲ್ಲಿ ಹಾಗೂ ರೈತಸಂಘದ ಸದಸ್ಯರಲ್ಲಿ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ ಸಾಲದ ಮನ್ನಾ ವಿಚಾರ ನಮ್ಮ ಪ್ರಣಾಳಿಕೆಯಲ್ಲಿರುವುದು ನಿಜ. ಅದನ್ನು ನೋಡಿ ಕರ್ನಾಟಕದ ಜನತೆ ನಮಗೆ ಬಹುಮತ ಕೊಟ್ಟು ಕಳಿಸಿದ್ದಾರೆ. ನಾವೂ ಸಹ ರೈತರಿಂದ ರೈತರ ಹಿತವನ್ನು ಕಾಪಾಡುವುದಕ್ಕೆಂದು ಬಂದಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವೇನು ಆಕಾಶದಿಂದ ಉದುರಿಬರಲಿಲ್ಲ. ರೈತರ ಬಗ್ಗೆ ಕಳಕಳಿ ನಮಗೂ ಇದೆ. ಬಿಜೆಪಿಯ ಸನ್ಮಾನ್ಯ ಸದಸ್ಯರು ಹಿಂದೆ ಸರ್ಕಾರದಲ್ಲಿ ಭಾಗವಹಿಸಿದ್ದರು, ರೈತರ ಆಗುಹೋಗುಗಳಲ್ಲಿ ಭಾಗಿಗಳಾಗಿದ್ದರು. ಆಗ ಸರ್ಕಾರವನ್ನು ಇವರು ಇವತ್ತಿನಂತೇ ಜಗ್ಗಿ ಕೇಳಿದ್ದರೆ ಇವತ್ತು ರೈತರ ಸ್ಥಿತಿ ಈ ರೀತಿ ಹೀನಾಯವಾಗುತ್ತಿರಲಿಲ್ಲ. ಆದ್ದರಿಂದ ರೈತರ ಇವತ್ತಿನ ಸ್ಥಿತಿಗೆ ಇವರೂ ಕಾರಣರೇ ಆದಂತಾಗುತ್ತದೆ. ಸನ್ಮಾನ್ಯ ಸದಸ್ಯರು ತಮ್ಮ ಹಠವನ್ನು ಬಿಟ್ಟು ತಮ್ಮ ಸ್ವಸ್ಥಾನಗಳಲ್ಲಿ ಸೇರಲಿ. ಇಲ್ಲವಾದರೆ ಇನ್ನು ಮುಂದಿನ ಐದು ವರ್ಷಗಳ ಕಾಲ ಇವರು ಕೇಳುವುದನ್ನಾಗಲೀ ಪಡೆಯುವುದನ್ನಾಗಲೀ ತ್ಯಜಿಸುವರೇನು ? ಚೆನ್ನಾಗಿ ಯೋಚಿಸಿ. ಆಡಳಿತ ನಡೆಸಲು ಜನ ನಮಗೆ ಐದು ವರ್ಷ ಅವಕಾಶ ಕೊಟ್ಟಿದ್ದಾರೆ, ನಾವು ಮಾಡುವುದನ್ನು ಜನರೂ ನೋಡುತ್ತಾರೆ. ನಾವೂ ರೈತರಾಗಿದ್ದೇವೆ ಎನ್ನುವುದನ್ನು ಮತ್ತೊಮ್ಮೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಶಿವರಾಮೇಗೌಡ.—ವಾಟಾಳ್ ನಾಗರಾಜರು ಮಾತಾಡುವಾಗ ಇವತ್ತು ವಿರೋಧ ಪಕ್ಷದಲ್ಲಿ ಕುಳಿತಿರುವವರು ಒಂದು ಕಾಲದಲ್ಲಿ ಸರ್ಕಾರದೊಡನೆ ಭಾಗಿಗಳಾಗಿದ್ದರು ಎಂದರು. ಆ ಬಗ್ಗೆ ಸ್ಪಷ್ಟೀಕರಣ ಕೊಡಲು ಬಯಸುತ್ತೇನೆ. ಮಾನ್ಯ ಯಡಿಯೂರಪ್ಪನವರು ತಳೆದಿರುವ ನಿಲುವಳಿ

ಸೂಚನೆ ಎಲ್ಲರೂ ಒಪ್ಪುವಂಥಾದ್ದೇ. ಅದನ್ನು ಚರ್ಚೆ ಮಾಡಬೇಕೇ ಬೇಡವೇ ಎನ್ನುವುದನ್ನು ತೀರ್ಮಾನಿಸುವ ಅಧಿಕಾರ ಸನ್ಮಾನ್ಯ ಅಧ್ಯಕ್ಷರಿಗಿದೆ. ಸನ್ಮಾನ್ಯ ಸಭಾನಾಯಕರು ಇದನು ಬಹಳ ಮುಖ್ಯವಾದ ವಿಷಯವೆಂದೂ, ತಾವೂ ಕೂಡ ರೈತರ ಪರವಾಗಿರುವವರೆಂಬ ಮಾತನ್ನು ಸರ್ಕಾರಕ್ಕೆ ತಿಳಿದ ಮೇಲೆ ನಾವು ಅದನ್ನು ಎಲ್ಲರೂ ಗೌರವಿಸಬೇಕು. ಅವರು ಮತ್ಸದ್ದಿಗಳು ಅನುಭವ ವಿರುವವರು. ನಿನ್ನೆ ತಾನೇ ನಾವೆಲ್ಲ ಪ್ರಮಾಣ ವಚನ ಮಾಡುವಾಗ ದೇವರ ಹೆಸರಿನಲ್ಲಿ ಜನಗಳ ಕಷ್ಟನಿವಾರಣೆಗಳಿಗಾಗಿ ಸದನದ ಸಮಿತಿಯನ್ನು ವಿಮಾಸಲಿಡುತ್ತೇವೆಂದು ಹೇಳಿದ್ದೇವೆ. ಒಂದೇ ದಿವಸಕ್ಕೇ ಅದನ್ನು ಮರೆತು ಸದನವನ್ನು ತಪ್ಪು ದಾರಿಗೆ ಎಳೆಯುವ ರೀತಿಯಲ್ಲಿ ಧರಣಿ ಕುಳಿತಿರುವುದು ಎಲ್ಲರಿಗೂ ನೋವುಂಟು ಮಾಡುವ ವಿಚಾರ. ಈ ಕಡೆ ವಿರೋಧಪಕ್ಷದಲ್ಲಿ ಕುಳಿತಿರುವ ಎಲ್ಲರಿಗೂ ಹೇಳುವುದೇನೆಂದರೆ ಸರ್ಕಾರವೇನಾದರೂ ಜನವಿರೋಧಿ ಕೆಲಸ ಮಾಡಿದ್ದರೆ ಅವರಿಗಿಂತ ಮೊದಲೇ ನಾವು ಧರಣಿ ಕುಳಿತಿರುತ್ತಿದ್ದೆವು. ನಾವೂ ರೈತರೇ, ಸಾಲ ಮನ್ನಾ ಮಾಡುವುದಿಲ್ಲ ಎಂದು ಹೇಳಿದರೆ ನಾವೂ ಅಲ್ಲಿ ಹೋಗಿ ಕುಳಿತುಕೊಳ್ಳುತ್ತೇವೆ. ಹರಿಯಾಣದಲ್ಲಿ ದೇವಿಲಾಲರು ಅದರಂತೆ ಮಾಡಿ, ಈಗ ರಿಸರ್ವ್ ಬ್ಯಾಂಕಿನವರು ಹಾಗೆಲ್ಲ ಮಜಾ ಮಾಡಲು ಬರುವುದಿಲ್ಲ ಎಂದು ಅಲ್ಲಿ ಹೇಳುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ.—ಕೇಂದ್ರ ಸರ್ಕಾರ ಆ ತರಹ ಹೇಳಿಲ್ಲ. ೧೦ ಸಾವಿರಕ್ಕಿಂತ ಕಡಿಮೆ ಇರುವ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು.—ಈ ಚರ್ಚೆಗೆ ಒಂದು ಹೊಸ ಕಾರಣವನ್ನು ತಾವು ಸೇರಿಸುತ್ತಿದ್ದೀರಿ. ಇಲ್ಲಿಗೇ ಮುಗಿಸೋಣ.

ಒಬ್ಬ ಮಾನ್ಯ ಸದಸ್ಯರು.—ಸದನದ ಸಮಿತಿ ಮಾಡುವ ಬಗ್ಗೆ ಪರಿಶೀಲನೆ ಮಾಡಿ ಎಂದು ಹೇಳಿದರು ಅವರ ಪರವಾಗಿ ನಾನೂ ಕೂಡ ಅದನ್ನೇ ಹೇಳುತ್ತಿದ್ದೇನೆ.

(ಮಾನ್ಯ ಯಡಿಯೂರಪ್ಪನವರು ವೆಲ್‌ನಿಂದ ತಮ್ಮ ಸ್ಥಾನಕ್ಕೆ ಬಂದು ಕುಳಿತರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ,

(ಗೊಂದಲ)

ಶ್ರೀ ಡಿ. ಎ ಚಿನ್ನಪ್ಪ.—ವೆಲ್‌ನಿಂದ ಎದ್ದು ಬಂದು ಮಾತನಾಡುವುದು ಸರಿಯಲ್ಲ. ತಾವು ನಾಲ್ಕು ಸಾರಿ ಗೆದ್ದು ಬಂದಿದ್ದೀರಿ ಈಗಲೂ ಅದನ್ನೇ ಮಾಡುತ್ತಿದ್ದೀರಿ,

(ಗೊಂದಲ)

† ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ರೈತರ ಹಿತದೃಷ್ಟಿಯನ್ನು ಕಾಪಾಡತಕ್ಕಂತಹ ದೃಷ್ಟಿಯಿಂದ ಅವರ ಸಾಲವನ್ನು ಮನ್ನಾ ಮಾಡುವಂತಹ ವಿಷಯದ ಬಗ್ಗೆ ನಮ್ಮ ಪಕ್ಷದ ೪ ಜನ ಸದಸ್ಯರಿಗೆ ಅಥವಾ ರೈತ ಸಂಘದ ಸದಸ್ಯರಿಗಾಗಲೀ ನಮಗೆ ಮಾತ್ರ ಕಳಕಳಿ ಇದೆ ಬೇರೆ ಸದಸ್ಯರಿಗೆ ಕಳಕಳಿ ಇಲ್ಲ ಎಂದು ನಾನು ಹೇಳುತ್ತಿಲ್ಲ. ನಾನು ಈ ನಿಲುವಳಿ ಸೂಚನೆಯನ್ನು ಕಳಿಸಿದಂತಹ ಉದ್ದೇಶವೇನೆಂದರೆ ಕೇಂದ್ರ ಸರಕಾರದ ಸಹಭಾಗಿತ್ವ ಇದರಲ್ಲಿ ಇರುವುದರಿಂದ ವ್ಯಾಪಕವಾಗಿ ಇಲ್ಲಿ ಇರುವಂತಹ ಎಲ್ಲಾ ಸದಸ್ಯರೂ ಕೂಡ ಈ ನಿಲುವಳಿ ಸೂಚನೆಯ ಚರ್ಚೆಯಲ್ಲಿ ಭಾಗವಹಿಸಿದರೆ ಇದರ ಸಾಧಕ ಬಾಧಕಗಳ ಬಗ್ಗೆ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳಲು ಸಭಾ ನಾಯಕರಿಗೆ ಅನುಕೂಲವಾಗಬಹುದೆಂಬ ದೃಷ್ಟಿಯಿಂದ ಕಳಿಸಿದ್ದೇನೆ. ಈ ನಿಲುವಳಿ ಸೂಚನೆಯನ್ನು ಕಳಿಸುವ ಮೂಲಕ ರಾಜ್ಯದ ರೈತರ ಬಗ್ಗೆ ಕಳಕಳಿಯಿಂದ ವಿರೋಧ ಪಕ್ಷದಲ್ಲಿ ಕುಳಿತು ನಾನು ನನ್ನ ಕರ್ತವ್ಯ ದೃಷ್ಟಿಯಿಂದ ಈ ಕೆಲಸ ಮಾಡುತ್ತಿದ್ದೇನೆಯೇ ಹೊರತು ಬೇರೆ ಯಾವ ದೃಷ್ಟಿಯೂ ಇಲ್ಲ. ತಾವು ಮಾತನಾಡತಕ್ಕಂತಹ ಸಂದರ್ಭದಲ್ಲಿ ಇದಕ್ಕೊಂದು ೨೧ನೇ ತಾರೀಖು ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದಿರಿ. ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಒಂದು ಸಲಹೆಯನ್ನು ಕೊಟ್ಟಿ ಅದನ್ನು ಒಪ್ಪುವುದು ಬಿಡುವುದು ಸಭಾನಾಯಕರಿಗೆ ಬಿಟ್ಟದ್ದು ನಾನು ಬಲವಂತ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಅವರದ್ದೇ ಆದಂತಹ ಎಡರು ತೊಡರುಗಳು ಇರುತ್ತವೆ. ರೈತರ ಸಾಲವನ್ನು ಮನ್ನಾ ಮಾಡುವಂತಹ ಸಂದರ್ಭದಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ಸಾಲ ಅಲ್ಲದೆ ಅನೇಕ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲವನ್ನು ರೈತರು ಪಡೆದಿರುವುದು ಇದ್ದು ಅನೇಕ ವಿಷಯಗಳ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದ ಸಭಾ ನಾಯಕರು ಒಪ್ಪಿದರೆ ಎಲ್ಲಾ ಸದಸ್ಯರಿಂದೊಡಗೂಡಿದ ಸದನ ಸಮಿತಿ ಮಾಡಿ ಅದರ ಸಾಧಕ ಬಾಧಕಗಳ ಬಗ್ಗೆ ಯೋಚನೆ ಮಾಡಿ ಈ ಸದನ ಮುಗಿಯುವುದರೊಳಗೆ ಸರಕಾರದ ನಿಲುವು ರೈತನ ಸಾಲ ಮನ್ನಾ ಮಾಡುವುದರ ಬಗ್ಗೆ ಏನು ಎಂಬುದನ್ನು ತಿಳಿಸಿದರೆ ಒಳ್ಳೆಯದು. ಡಿಸೆಂಬರ್ ಒಳಗೆ ರೈತರು ಸಾಲವನ್ನು ಮರುಪಾವತಿ ಮಾಡಬೇಕಾಗಿದೆ. ಈಗಾಗಲೇ ಅನೇಕ ರೈತರ ಮನೆ ಮಂಠಗಳ ಜಪ್ತಿ ನಡೆಯು

ತ್ತಿದೆ. ತಾವು ತೀರ್ಮಾನ ತೆಗೆದುಕೊಂಡರೆ ರೈತರು ನೆಮ್ಮದಿಯ ನಿಟ್ಟುಸಿರು ಬಿಡಬಹುವುದು ಆ ಭಾವನೆಯಿಂದ ನಾನು ಒತ್ತಾಯ ಮಾಡುತ್ತಿದ್ದೇನೆಯೇ ಹೊರತು ಬೇರೇನೂ ಇಲ್ಲ. ತಾವು ದಯಮಾಡಿ ಇವತ್ತು ಸಂಜೆ ಅಥವಾ ನಾಳೆ ಪ್ರತ್ಯೇಕವಾಗಿ ಎಲ್ಲಾ ಸದಸ್ಯರೂ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವುದಕ್ಕೆ, ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಸಾಲ ಮನ್ನಾ ಮಾಡುವುದರ ಬಗ್ಗೆ ಸರಕಾರದ ಸ್ಪಷ್ಟವಾದ ನಿಲುವು ಏನು ಇದು ಆಗುತ್ತದೆಯೋ ಅಥವಾ ಇಲ್ಲವೇ ಎಂದು ಹೇಳಿದರೆ ಅವರು ಸಿದ್ಧತೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಮತ್ತು ವಿರೋಧ ಪಕ್ಷದ ಸದಸ್ಯರು ಇದರ ಬಗ್ಗೆ ಯಾವ ನಿಲುವು ತೆಗೆದುಕೊಳ್ಳಬೇಕು ಯಾವ ರೀತಿ ಹೋರಾಟ ಮಾಡಬೇಕೆಂಬುದರ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಅನುಕೂಲವಾಗುತ್ತದೆಂದು ಮಾನ್ಯ ಸಭಾನಾಯಕರಲ್ಲಿ ವಿನಂತಿಸುತ್ತೇನೆ. ಸರಕಾರದ ನಿಲುವು ಏನು ಎಂಬುದನ್ನು ಸ್ಪಷ್ಟ ಮಾಡಿ ಸದನದ ಸಮಿತಿ ಮಾಡಿ ಅದರ ಸಾಧಕಬಾಧಕಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುವುದಕ್ಕೆ ಮಾನ್ಯ ಸಭಾನಾಯಕರು ಒಪ್ಪಿಕೊಳ್ಳಬೇಕೆಂದು ಅತ್ಯಂತ ವಿನಯದಿಂದ ರೈತರ ಹಿತ ದೃಷ್ಟಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇತರೇ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರ ಬಂದಿದೆ ಅಲ್ಲಿನ ಮುಖ್ಯ ಮಂತ್ರಿಗಳಿಗೆ ಮತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಳ್ಳೆಯ ಸಂಬಂಧ ಇದೆ ಅವರು ಸಾಲ ಮನ್ನಾ ಮಾಡುವಂತಹ ವಿಷಯದಲ್ಲಿ ಯಾವ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆಂಬುದನ್ನು ತಿಳಿದುಕೊಂಡು ಎರಡು ದಿವಸದಲ್ಲಿ ಹೇಳಬಹುದಾಗಿತ್ತು. ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಚುನಾವಣೆಗೆ ಮುಂಚೆ ಆಶ್ವಾಸನೆಯನ್ನು ತಾವು ಕೊಟ್ಟಾಗ, ಅದು ಈಗಿನ ಕೇಂದ್ರ ಸರಕಾರದ ತೀರ್ಮಾನದ ಆಧಾರ ಆಗಿರಲಿಲ್ಲ. ರೈತರ ಸಾಲ ಮನ್ನಾ ಮಾಡುತ್ತೀರೆಂದು ಜನ ತಮಗೆ ಇಷ್ಟು ಬಹುಮತವನ್ನು ಕೊಟ್ಟಿದ್ದಾರೆ. ರೈತರು ಅನೇಕ ಕಷ್ಟ ಕಾರ್ಪಣ್ಯಗಳಿಂದ ಒದ್ದಾಡುತ್ತಿದ್ದಾರೆ. ಈ ಬರಗಾಲಕ್ಕೆ ತುತ್ತಾಗಿ ರೈತ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾನೆ. ರೈತರ ಹಿತದೃಷ್ಟಿಯಿಂದ ಅವರ ಸಾಲವನ್ನು ಮನ್ನಾ ಮಾಡುವುದರ ಬಗ್ಗೆ ಸರಕಾರದ ಸ್ಪಷ್ಟ ನಿಲುವು ಏನೆಂದು ತಿಳಿಸಬೇಕು.

ಎರಡನೆಯದು ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ರಾಜ್ಯದ ರೈತರ ಬಗ್ಗೆ ಋಣಪ್ರತಿಷ್ಟೆಯಿಂದ ಈ ರೀತಿ ನಿಂತಿದ್ದೇನೆ. ಎಂದು ಯಾರೂ ಭಾವಿಸಬಾರದು, ದಯವಿಟ್ಟು ಸರ್ಕಾರದವರು ಆ ರೀತಿ ಭಾವಿಸಬಾರದು. ರಾಜ್ಯಪಾಲರ ಭಾಷಣದಲ್ಲಿ ತಾವು ಏನಾದರೂ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಿದ್ದರೆ ನಾವು ಇವತ್ತು ಇದರ ಬಗ್ಗೆ ಕೇಳುತ್ತಿರಲಿಲ್ಲ. ಇದರ ಬಗ್ಗೆ ಯೋಚನೆಯನ್ನು ಮಾಡುತ್ತೇವೆ ಎಂದು 'ಹೇಳಿ ರಾಜ್ಯಪಾಲರ ಭಾಷಣದಲ್ಲಿ ಅಭಿಪ್ರಾಯವನ್ನು ತಿಳಿಸಬಹುದಾಗಿತ್ತು. ಅದರಲ್ಲಿ ಪ್ರಸ್ತಾಪ ಇಲ್ಲದೇ ಇರುವುದರಿಂದ ಪ್ರತ್ಯೇಕವಾದ ಚರ್ಚೆ ಮಾಡಬೇಕಾಯಿತು. ಇವತ್ತು ತಪ್ಪಿದರೆ ನಾಳೆ ಇದಕ್ಕೆ ಪ್ರತ್ಯೇಕವಾಗಿ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದು ಸಾಧ್ಯವಿಲ್ಲ ಎಂದು ಹೇಳಿದರೆ ಇದರ ಬಗ್ಗೆ ಒಂದು ಸದನದ ಸಮಿತಿಯನ್ನಾದರೂ ಮಾಡಿ ಇದರ ಸಾಧಕ ಬಾಧಕಗಳು ಏನು ಮಾಡಬೇಕು, ಇದರ ಬಗ್ಗೆ ಸರ್ಕಾರದ ನಿಲುವೇನು, ಇದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು ಎಂದು ನಿಮ್ಮ ಮೂಲಕ ಮಾನ್ಯ ಸಭಾನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದರಲ್ಲಿ ಅಭಿಪ್ರಾಯ. ವ್ಯತ್ಯಾಸಗಳು ಬಹಳ ತೀವ್ರವಾಗಿದೆ ಎಂದು ನನಗೇನೂ ಕಾಣುತ್ತಿಲ್ಲ. ನೀವು ಏನು ಹೇಳುತ್ತಿದ್ದೀರಿ, ಚರ್ಚೆಯನ್ನು ಇವತ್ತೇ ಮಾಡಿ ಎಂದು ಹೇಳುತ್ತಿದ್ದೀರಿ. ನಾಳೆ ಮಾಡಿ ಎಂದು ಅವರು ಹೇಳುತ್ತಿದ್ದಾರೆ. ನಿಮಗೂ ಅವರಿಗೂ ೨೪ ಗಂಟೆಗಳ ವ್ಯತ್ಯಾಸ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನೀವು ಹೇಳಿದ ಮೇಲೆ ನಿಮಗೆ ಗೌರವವನು ಕೊಡದಿದ್ದರೆ ಸರ್ಕಾರದ ಕಾರ್ಯಕಲಾಪ ನಡೆಯುವುದಿಲ್ಲ. ನಾಡಿದ್ದೇ ಚರ್ಚೆ ಮಾಡಲಿ, ಆದರೆ ಇದಕೆ ಸಮಯವನು ನಿಗದಿ ಮಾಡಿ ಉತ್ತರವನು ಕೊಡಲಿ. ಅಂತಿಮವಾಗಿ ರಾಜ್ಯದ ರೈತರ ಬಗ್ಗೆ ಒಳ್ಳೆಯದಾದರೆ ಸಾಕು. ಈ ಕಾಂಗ್ರೆಸ್ ಸರ್ಕಾರದಿಂದ ರಾಜ್ಯದ ರೈತರಿಗೆ ಅನುಕೂಲವಾಯಿತು ಎಂದು ನಿಮಗೆ ಸರ್ಟಿಫಿಕೇಟ್ ಕೊಡುತ್ತಾರೆ.

ಅಧ್ಯಕ್ಷರು.—೨೧ನೇ ತಾರೀಖು ೪ ಗಂಟೆಗೆ ಪ್ರತ್ಯೇಕವಾಗಿ ಚರ್ಚೆಯನ್ನು ಇದರ ಬಗ್ಗೆ ಮಾಡೋಣ, ೨೨ನೇ ತಾರೀಖು ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರ ಬಗ್ಗೆ ಪ್ರತ್ಯೇಕವಾದ ಉತ್ತರ ಆಗಬೇಕು. ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡುವಾಗ ಇದಕ್ಕೂ ಉತ್ತರ ಕೊಡುವುದು ಆಗಬಾರದು.

ಅಧ್ಯಕ್ಷರು.—ನನಗೆ ೨೨ ವರ್ಷ ೨೩ ವರ್ಷ ಶಾಸನಸಭೆಗಳ ಅನುಭವ ಇದೆ. ಚರ್ಚೆಗೆ ಇವತ್ತೇ ಉತ್ತರ ಕೊಡಬೇಕು ಎನ್ನತಕ್ಕಂಥ ನಿಯಮ ಏನೂ ಇಲ್ಲ, ಮತ್ತು ಒತ್ತಾಯವನ್ನು ಹೇರತಕ್ಕಂಥದ್ದು ಸಾಧ್ಯವೂ ಇಲ್ಲ. ಪ್ರತ್ಯೇಕವಾದ ಚರ್ಚೆಗೆ ಅವರು ಒಪ್ಪಿದ್ದಾರೆ, ಸರ್ಕಾರ ಏನು ಇದರ ಬಗ್ಗೆ ಮಹತ್ವವನ್ನು ಕೊಟ್ಟಿದೆ ಎನ್ನತಕ್ಕಂಥದ್ದು ಧ್ಯೋತಕವಾಗಿದೆ. ಆದುದರಿಂದ ಅವರು ಚರ್ಚೆಗೆ ಪ್ರತ್ಯೇಕವಾಗಿ ಒಪ್ಪಿರುವುದರಿಂದ ತಾವು ಇನ್ನೂ ಹಠ ಮಾಡತಕ್ಕಂಥದ್ದು ಅಷ್ಟು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ೨೧ನೇ ತಾರೀಖು ಚರ್ಚೆಗೆ ಅವಕಾಶ ಮಾಡಿಕೊಡಲಿ, ೨೧ನೇ ತಾರೀಖು ಚರ್ಚೆಗೆ ಪ್ರತ್ಯೇಕವಾಗಿ ಉತ್ತರವನ್ನು ಕೊಡಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಲ್ಲಿ ರೈತರ ವಿಷಯ ಚರ್ಚೆ ಆಗುವುದಕ್ಕೆ ಇಷ್ಟವಿಲ್ಲ' ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಇಷ್ಟವಿಲ್ಲ. ತಾವು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಇದಕ್ಕಿಂತ ಒತ್ತಾಯ ಮಾಡುವುದಕ್ಕೆ ಇಷ್ಟವಿಲ್ಲ. ೨೧ನೇ ತಾರೀಖು ಚರ್ಚೆಗೆ ಅವಕಾಶ ಮಾಡಿ ಕೊಡಬೇಕು. ೨೧ನೇ ತಾರೀಖು ಚರ್ಚೆಗೆ ಬೆಳಿಗ್ಗೆ ಪ್ರತ್ಯೇಕವಾಗಿ ಉತ್ತರವನ್ನು ಕೊಡಬೇಕು ಎಂದು ಸಭಾನಾಯಕರಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇನ್ನು ಇದಕ್ಕಿಂತ ಹೆಚ್ಚಿಗೆ ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ,

(ಈ ಹಂತದಲ್ಲಿ ಶ್ರೀ ಯಡಿಯೂರಪ್ಪನವರು ಪುನಃ ತಮ್ಮ ಸ್ಥಾನದಿಂದ ಎದ್ದು ಬಂದು ಸದನದ ಬಾವಿಯಲ್ಲಿ ಕುಳಿತುಕೊಂಡರು)

(ಗೊಂದಲ)

ಅಧ್ಯಕ್ಷರು.—ಈ ಸದನದ ಕಾರ್ಯಕಲಾಪಗಳನ್ನು ನಡೆಸಲೇಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು. ಉಪನಾಯಕರು ಒಪ್ಪುತ್ತಾರೆ. ಎಲ್ಲಾ ಪ್ರಯತ್ನಗಳನ್ನೂ ಕೂಡಾ ಅವರು ಮಾಡಿದ್ದಾರೆ, ನಾನೂ ಮಾಡಿದ್ದೇನೆ. ಅಂತಿಮವಾಗಿ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಅವರು ಮನವಿಯನ್ನು ಮಾಡಿದ್ದಾರೆ. ಮನವಿಗೆ ಪುರಸ್ಕಾರ ಕೂಡಾ ದೊರೆತಿದೆ. ಉತ್ತರವನ್ನು ಪ್ರತ್ಯೇಕವಾಗಿ ಕೊಟ್ಟರೆ ಏನು ? ಅಥವಾ ಒಟ್ಟಾರೆ ಉತ್ತರವನ್ನು ಕೊಡುವಾಗ ಈ ವಿಚಾರವನ್ನೂ ಕೂಡಾ ಪ್ರಸ್ತಾಪ ಮಾಡುತ್ತೇವೆ ಎಂದು ಹೇಳಿದರೆ ನನಗೇನೂ ಅದರಿಂದ ಯಾವ ಚ್ಯುತಿಯೂ ಕಾಣಲಿಲ್ಲ. ಅಥವಾ ಚರ್ಚೆ ಮಾಡಬೇಕು ಎನ್ನತಕ್ಕಂಥ ವಿಚಾರದ ಮಹತ್ವಕ್ಕೂ ಕೂಡಾ ಯಾವ ವಿಧದಲ್ಲಿಯೂ ಕುಂದು ಬರುತ್ತದೆ ಎಂದು ನಾನು ಭಾವಿಸುವುದಿಲ್ಲ. ಆದುದರಿಂದ ನಿಮ್ಮಲ್ಲಿ ಅಂತಿಮವಾಗಿ ನಮ್ಮ ಸದಸ್ಯರುಗಳಿಗೆ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ. ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಬೇಕು ಮತ್ತು ಈ ಸಭೆಯ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯಬೇಕು, ನನ್ನ ಜೊತೆಯಲ್ಲಿ ಸಹಕಾರ ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸಭಾಧ್ಯಕ್ಷರೇ, ವಿಷಯ ಈಗ ಒಂದು ತೀರ್ಮಾನಕ್ಕೆ ಬರಬಹುದು ಎನ್ನಬಹುದಾದ ಸ್ಥಿತಿಯನ್ನು ತಲುಪಿದೆ. ಚರ್ಚೆ ಮಾಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ ಅದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಹೇಗೆ ಹೇಳಬೇಕು ಎನ್ನುವುದು ಇದೆ. ಉತ್ತರ ಒಟ್ಟಾಗಿ ಹೇಳಬೇಕೇ ಅಥವಾ ಬೇರೆ ಬೇರೆಯಾಗಿ ಹೇಳಬೇಕೇ ಎನ್ನುವುದು. ಅವರು ಚರ್ಚೆಗೂ ಅವಕಾಶ ಕೊಟ್ಟು ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ, ಯಾವ ರೂಪದಲ್ಲಿ ಉತ್ತರ ಕೊಡಬೇಕೆಂಬುದು ಸಭಾನಾಯಕರಿಗೆ ಬಿಡುವುದು ಸರಿ. ಆದರೆ ಉತ್ತರ ನಮಗೆ ಬೇಕು. ಆ ಕಾರಣದಿಂದ ಹಿರಿಯ ಅನುಭವಿ ಸದಸ್ಯರಾದ ಶ್ರೀ ಯಡಿಯೂರಪ್ಪನವರಿಗೆ ನಾನು ಪ್ರಾರ್ಥನೆ ಮಾಡುತ್ತೇನೆ. ಇದನ್ನು ಒಪ್ಪಿಕೊಂಡು ನಿಮ್ಮ ಧರಣಿಯನ್ನು ನಿಲ್ಲಿಸಬೇಕು. ಸಭಾಧ್ಯಕ್ಷರು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ, ಮಾನ್ಯ ಸಭಾ ನಾಯಕರು ಸಹ ಉತ್ತರವನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಇಲ್ಲಿರತಕ್ಕ ಪ್ರಶ್ನೆ ಎಂದರೆ ತಾಂತ್ರಿಕವಾಗಿ ಉತ್ತರವನ್ನು ಬೇರೆ ಕೊಡಬೇಕೆಂದು.

ಶ್ರೀ ಬಿ. ಎಸ್. ಯಡಿಯೂರಪ್ಪ (ವೆಲ್‌ನಿಂದ).—ಚರ್ಚೆ ಮಾಡಲಿಕ್ಕೆ ಇಲ್ಲಿ ಪ್ರತಿಷ್ಠೆ ಬೇಡ. ಈ ಮನೆಯಲ್ಲಿ ಮಾತನಾಡುವುದಕ್ಕೆ ಪ್ರತಿಷ್ಠೆ ಪ್ರಶ್ನೆ ಅಲ್ಲ. ರಾಜ್ಯದ ರೈತರ ಹಿತದ ಪ್ರಶ್ನೆ. ನನ್ನನ್ನು ಉದ್ಧಾರ ಮಾಡುವ ಪ್ರಶ್ನೆ ಅಲ್ಲ...

(ಗೊಂದಲ)

ಶ್ರೀ ಡಿ.ಬಿ ಚಂದ್ರೇಗೌಡ.—ನಾನು ಸಹ ಅವರು ಔದಾರ್ಯದಿಂದ ಅವಕಾಶ ಕೊಟ್ಟಿದ್ದಾರೆಂದ ಹೇಳಲಿಲ್ಲ. ಸಭಾಧ್ಯಕ್ಷರು ಚರ್ಚೆಗೆ ಅವಕಾಶ ಕೊಟ್ಟಿದ್ದಾರೆಂದು ಹೇಳಿದೆ. ಅದು ಮುಗಿದ ಮೇಲೆ ಉಳಿದ ವಿಚಾರವನ್ನು ಚರ್ಚೆ ಮಾಡೋಣ. ತಾವು ತಮ್ಮ ಆಸನಕ್ಕೆ ಬರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ತಾವು ವಿಧಾನಸಭಾಧ್ಯಕ್ಷರಾಗಿ ಬಹಳಷ್ಟು ಉದಾರತೆಯನ್ನು ತೋರಿಸಿದ್ದೀರಿ. ಸಭಾನಾಯಕರು ಸಹ ಅವಕಾಶ ಕೊಟ್ಟಿದ್ದಾರೆ. ರೈತರ ಸ್ಥಿತಿ ಬಗ್ಗೆ ಇವರಿಗೆ ಮಾತ್ರ ಅಲ್ಲ ಬೇರೆಯವರಿಗೂ ಅನುಕಂಪ ಇದೆ. ರೈತರ ವಸತಿ ಸಮಸ್ಯೆ, ನೀರಿನ ಸಮಸ್ಯೆ, ಉದ್ಯೋಗ ಸಮಸ್ಯೆ ಮತ್ತು ಉಪಕರಣಗಳ ಸಮಸ್ಯೆ ಇದೆ, ಇವಕ್ಕೆಲ್ಲಾ ಗಮನ ಕೊಡದೆ ಕೇವಲ ಬರೀ ಬ್ಯಾಂಕಿನ ಸಾಲದ ಬಗ್ಗೆ ಚರ್ಚೆ ಮಾಡುತ್ತಾ ಇಷ್ಟೊಂದು ಅನಾವಶ್ಯಕವಾಗಿ ಕಾಲವನ್ನು ವಿಳಂಬ ಮಾಡುತ್ತಿದ್ದಾರೆ. ವಿರೋಧ ಪಕ್ಷದವರು ಸಹ ಮನವಿ ಮಾಡಿದ್ದಾರೆ ನಮ್ಮಲ್ಲಿನ ಬಹಳ ಸದಸ್ಯರು ಸಹ ಕಳಕಳಿಯಿಂದ ಮನವಿ ಮಾಡಿದ್ದಾರೆ. ಇಷ್ಟಾದರೂ ಇವರು ಮೊಂಡುತನವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ನಿಯಮದ ಪ್ರಕಾರವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಇವರು ರೈತರ ಹಿತವನ್ನು ಕಾಪಾಡುತ್ತಿಲ್ಲ, ಬದಲಿಗೆ ತೊಂದರೆ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ...

ಅಧ್ಯಕ್ಷರು.— ಈ ಮುಂದಿನ ಪ್ರಸ್ತಾವನೆಗೆ ಹೋಗುತ್ತಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

ಕೋಲಾರದ ಜಿಲ್ಲಾಪರಿಷತ್ತಿಗೆ ರಾಜ್ಯ ಮತ್ತು ಕೇಂದ್ರಸರ್ಕಾರ ಬಿಡುಗಡೆ ಮಾಡಿದಅನುದಾನದ ಹಣದ ದುರುಪಯೋಗ

ಶ್ರೀ ಎಂ. ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾಪರಿಷತ್ತಿಗೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳು).— ಈ ವಿಚಾರವನ್ನು ನಾಳೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.— ಈ ವಿಷಯವನ್ನು ನಾಳೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆಗಳು ಮಾನ್ಯ ಯಡಿಯೂರಪ್ಪನವರು ಅವರ ಸ್ಥಾನದಲ್ಲಿ ಇಲ್ಲದೇ ಇರುವುದರಿಂದ ಈ ಪ್ರಸ್ತಾವನೆ ಬರುವುದಿಲ್ಲ.

ನಿಯಮ ೩೩೪ರ ಮೇರೆಗೆ

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರನ್ನು ಮತ್ತು ಸಾಲಿಗ್ರಾಮ ಪುರಸಭೆಗಳನ್ನು ಮಂಡಲ ಪಂಚಾಯತಿಯಾಗಿ ಪರಿವರ್ತಿಸಿರುವುದು,

ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸರಕಾರ ಒಂದೇ ವಿಷಯಕ್ಕೆ ಎರಡು ರೀತಿಯ ನಿರ್ಧಾರ ಮಾಡಿದ್ದರಿಂದಾಗಿ ಉದ್ಭವಿಸಿದ ತೊಂದರೆಯ ಕುರಿತು ಸರಕಾರದ ಗಮನ ಸೆಳೆಯುವುದು ನನ್ನ ಉದ್ದೇಶ. ಕರ್ನಾಟಕ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಕಾನೂನಿನನ್ವಯ ೧೨,೫೦೦ ಜನಸಂಖ್ಯೆತನಕ ಇರುವ ಗ್ರಾಮ ಅಥವಾ ಗ್ರಾಮ ಸಮುದಾಯ ಮಂಡಲ